# ಕನ್ನಡ ವಿಶ್ವವಿದ್ಯಾಲಯ
# ಹಂಪಿ

## 2005–06ನೇ ಸಾಲಿನ ಲೆಕ್ಕ ತನಿಖಾ
## ವರದಿ



PDF created with pdfFactory trial version www.pdffactory.com

# ಕನ್ನಡ ವಿಶ್ವವಿದ್ಯಾಲಯ ಹಂಪಿಯ 2005–06ನೇ ಸಾಲಿನ ಲೆಕ್ಕ ಪತ್ರ ನಿರ್ವಹಣೆಯಲ್ಲಿ ಕಂಡು ಬಂದ ನ್ಯೂನತೆಗಳ ವಿವರಗಳು

| ಕ್ರ.ಸಂ | ಕಂಡಿಕೆ ಸಂಖ್ಯೆ | ನ್ಯೂನತೆಗಳ ವಿವರ |
|---|---|---|
| 1 | 5 | ಹಿಂದಿನ ಲೆಕ್ಕ ತನಿಖಾ ವರದಿಗಳಿಗೆ ಉತ್ತರಗಳನ್ನು ಸಲ್ಲಿಸದೇ ಇರುವುದು |
| 2 | 15 | ಬಾಕಿ ಇರುವ ಮುಂಗಡಗಳನ್ನು ಹೊಂದಾಣಿಕೆ ಮಾಡದೇ ಇರುವುದು |
| 3 | 16 | ಅವಶ್ಯಕತೆಗಿಂತ ಹೆಚ್ಚಿಗೆ ಮುಂಗಡ ಪಡೆದಿದ್ದು ಉಳಿದ ಮುಂಗಡ ಹಣವನ್ನು ತಡವಾಗಿ ಹಿಂತಿರುಗಿಸಿರುವುದು |
| 4 | 19 | ಕರಕುಶಲ ಮಾರಾಟ ಕೇಂದ್ರದಿಂದ ನೇರವಾಗಿ ರಸೀದಿ ಪುಸ್ತಕಗಳನ್ನು ಮುದ್ರಿಸಿಕೊಂಡಿರುವುದು. |
| 5 | 23 | ಪ್ರಸಾರಾಂಗ ವಿಭಾಗದಲ್ಲಿ ದಾಸ್ತಾನು ಭೌತಿಕ ತಪಾಸಣೆ ಬಗ್ಗೆ ನ್ಯೂನತೆಗಳು |
| 6 | 24 | ಪ್ರಸಾರಾಂಗದ ವಿಭಾಗದಲ್ಲಿ ಸರಸ್ವತಿ ಮಾರಾಟ ಮಳಿಗೆ ಹಾಗೂ ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಭೌತಿಕ ಪರಿಶೀಲನೆ ಮಾಡದಿರುವ ಬಗ್ಗೆ |
| 7 | 26 | ಪ್ರಸಾರಾಂಗದ ಮಾರಾಟ ಮೊತ್ತವನ್ನು ತಡವಾಗಿ ಜಮ ಮಾಡಿರುವುದು |
| 8 | 36 | ಕುಟುಂಬ ಪಿಂಚಣಿ ಮರಣ ಉಪದಾನ ರಜೆ ವೇತನ ಪರಿಶೀಲಿಸಲು ಸೇವಾ ಪುಸ್ತಕಗಳನ್ನು ಹಾಜರುಪಡಿಸಿಲ್ಲ. |
| 9 | 37 | ಎಲ್ಲಾ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಹಾಜರುಪಡಿಸಲ್ಲ. |
| 10 | 38 | ಸಿಬ್ಬಂದಿಯ ವೇತನ ಬಿಲ್‌ಗಳಲ್ಲಿ ಕಂಡು ಬಂದ ನ್ಯೂನತೆಗಳು |
| 11 | 39 | ಮಂಜೂರಾದ ಹುದ್ದೆಗಳ ವಿವರ ನೀಡಿರುವುದಿಲ್ಲ. |
| 12 | 40 | ಬಾಕಿ ಹಾಗೂ ಪೂರಕ ವೇತನ ಬಿಲ್‌ಗಳಲ್ಲಿ ಕಂಡು ಬಂದ ನ್ಯೂನತೆಗಳು |
| 13 | 42 | ಕಾಮಗಾರಿಗಳ ಬಿಲ್‌ಗಳಲ್ಲಿ ಕಂಡುಬಂದ ನ್ಯೂನತೆಗಳು |
| 14 | 45 | ಎಫ್.ಎಸ್.ಡಿಯನ್ನು ಕ್ಲೇಮು ಮಾಡದೇ ಇರುವ ಬಗ್ಗೆ |
| 15 | 46 | ಡೆಡ್ ಸ್ಟಾಕ್ ರಿಜಿಸ್ಟಾರ್ ನಿರ್ವಹಿಸಿರುವುದಿಲ್ಲ. |

ನಿಯಂತ್ರಕರ ಪರವಾಗಿ
ರಾಜ್ಯ ಲೆಕ್ಕ ಪತ್ರ ಇಲಾಖೆ
ಬೆಂಗಳೂರು



PDF created with pdfFactory trial version www.pdffactory.com

## ಕನ್ನಡ ವಿಶ್ವವಿದ್ಯಾಲಯ ಹಂಪಿಯ 2005–06ನೇ ಸಾಲಿನ ಲೆಕ್ಕ ಪರಿಶೋಧಾನ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟ ಮೊಬಲಗು ಮತ್ತು ವಸೂಲಾತಿಗೆ ಸೂಚಿಸಿದ ಮೊಬಲಗಿನ ವಿವರ

| ಕ್ರ.ಸಂ | ಕಂಡಿಕೆ ಸಂಖ್ಯೆ | ವಿವರ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 1 | 21 | ಐಸಿಹೆಚ್‌ಆರ್ ನಿಂದ ಅನುದಾನ ಪಡೆಯುವ ಬಗ್ಗೆ | – | 2500.00 |
| 2 | 27 | ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಸಾಲದ ಪುಸ್ತಕದ ಬಾಕಿ ಮೊತ್ತ ವಸೂಲಿ ಮಾಡದಿರುವುದು | – | 127504.00 |
| 3 | 28 | ಪ್ರಸಾರಾಂಗದಿಂದ ಖರೀದಿಸಿದ ಪುಸ್ತಕಗಳ/ ನಿಯತಕಾಲಿಕೆಗಳ ಬಾಕಿ ಮೊತ್ತ ವಸೂಲಿ ಮಾಡದಿರುವುದು | – | 473064.00<br>34840.00 |
| 4 | 29 | ಅರ್ಹತೆ ಇಲ್ಲದೇ ಕಿರಿಯ ಸಹಾಯಕರ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ಬಡ್ತಿ ನೀಡಿರುವುದು | – | 7848.00 |
| 5 | 30 | ಶ್ರೀ ಎಲ್. ನಾರಾಯಣ, ಅನುಚರ ಇವರಿಗೆ ವಿದ್ಯಾರ್ಹತೆ ಇಲ್ಲದೇ ಸಹಾಯಕ ಹುದ್ದೆಗೆ ಬಡ್ತಿ ನೀಡಿರುವುದು. | – | 1572.00 |
| 6 | 33 | ವಿಶ್ವವಿದ್ಯಾಲಯದ ಸಿಬ್ಬಂದಿಯವರಿಗೆ ಅರ್ಹತೆ ಇಲ್ಲದಿದ್ದರೂ ಯುಜಿಸಿ ವೇತನ ನೀಡಿರುವುದು. | 7955964.00 | – |
| 7 | 34 | ಸರ್ಕಾರದ ಆದೇಶಕ್ಕೆ ವ್ಯತ್ತಿರಿಕ್ತವಾಗಿ ಸಹಾಯಕ ನಿರ್ದೇಶಕರು ವೇತನ ನಿಗದಿ ಬಗ್ಗೆ | 753432.00 | – |
| 8 | 35 | ವಿಶ್ವವಿದ್ಯಾಲಯದ ಸಿಬ್ಬಂದಿ ವರ್ಗಕ್ಕೆ ಇ ವರ್ಗದ ಸ್ಥಳದ ಬದಲು ಸಿ ವರ್ಗದ ಮನೆ ಬಾಡಿಗೆ ಕೊಟ್ಟಿರುವುದು | – | 615660.00 |
| 9 | 36 | ಸೇವಾ ಪುಸ್ತಕಗಳನ್ನು ಹಾಜರುಪಡಿಸಿಲ್ಲ. | 610133.00 | – |
| 10 | 41 | ಪರಿಷ್ಕೃತ ದರದಲ್ಲಿ ಮನೆ ಬಾಡಿಗೆ ಮುರುವಳಿ ಮಾಡಿಲ್ಲ | – | 181140.00 |
| 11 | 43 | ಟೆಂಡರ್ ಕಾಮಗಾರಿಗಳ ಅಂತಿಮ ಬಿಲ್‌ಗಳ ಬಗ್ಗೆ | 168808.00 | – |
| 12 | 44 | ಕಾಮಗಾರಿ ಬಿಲ್‌ಗಳಲ್ಲಿ ಸಿಬಿಎಫ್. ಮುರುವಳಿ ಮಾಡುವ ಬಗ್ಗೆ | – | 608.00 |
| | | ಒಟ್ಟು ಮೊತ್ತ | 9488337.00 | 1444736.00 |

ನಿಯಂತ್ರಕರ ಪರವಾಗಿ
ರಾಜ್ಯ ಲೆಕ್ಕ ಪತ್ರ ಇಲಾಖೆ
ಬೆಂಗಳೂರು



PDF created with pdfFactory trial version www.pdffactory.com

# ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ಇದರ 2005–06ನೇ ಸಾಲಿನ ಪರಿಶೋಧನಾ ವರದಿಗೆ
## ಅನುಪಾಲನ ವರದಿ

| ಕ್ರ. ಸಂ | ಆಕ್ಷೇಪಣೆ | ಉತ್ತರ | ದಾಖಲೆ/ಲಗತ್ತು | ಷರಾ |
|---|---|---|---|---|
| 1 | **1.ಪೀಠಿಕೆ:**<br>2005–06ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಲೆಕ್ಕ ಪರಿಶೋಧನೆಯನ್ನು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ 1991 ರ ಸೆಕ್ಷನ್ 26 ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ/84 ಎಂ.ಎಸ್‌ಡಿ 93, ದಿನಾಂಕ 01.06.1993 ಮತ್ತು ಸಂಖ್ಯೆ ಇಡಿಯು ನಿ/97 ದಿನಾಂಕ 19.03.1997 ರನ್ವಯ ಕೈಗೊಂಡ ಲೆಕ್ಕ ಪರಿಶೋಧನಾ ವರದಿಯನ್ನು ಸೂಕ್ತ ಕ್ರಮಕ್ಕಾಗಿ ವಿಶ್ವವಿದ್ಯಾಲಯಕ್ಕೆ ಹಾಗೂ ಸಂಬಂಧಿಸಿದ ಕಛೇರಿಗಳಿಗೆ ಕಳುಹಿಸಲಾಗಿದೆ. | ಆಕ್ಷೇಪಣೆ ಇರುವುದಿಲ್ಲ. | | |
| 2 | **ಸಾಮಾನ್ಯ ಮಾಹಿತಿ :**<br>1 ಸಂಸ್ಥೆಯ ಹೆಸರು : ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ<br>2 ಲೆಕ್ಕ ತಪಾಸಣಾ ಅವದಿ : 01.04.2005 ರಿಂದ 31.03.2006<br>3 ಲೆಕ್ಕ ತಪಾಸಣೆ ಪ್ರಾರಂಭದ ದಿನಾಂಕ : 21.08.2006<br>4 ಲೆಕ್ಕ ತಪಾಸಣೆ ಮುಕ್ತಾಯದ ದಿನಾಂಕ : 11.10.2006<br>5 ಉಪಯೋಗಿಸಿದ ಮಾನವ ದಿನಗಳು : 148<br>6 ಲೆಕ್ಕ ತಪಾಸಣಾ ತಂಡ : 1. ಶ್ರೀ ಎ.ಪದ್ಮನಾಭಯ್ಯ, ಲೆಕ್ಕಪರಿಶೋಧನಾಧಿಕಾರಿ<br>2. ಶ್ರೀ ಬಿ.ಕೆ. ಸುಬ್ಬಣ್ಣ, ಲೆಕ್ಕಪರಿಶೋಧಕರು<br>3. ಶ್ರೀ ಕೆ. ಶ್ರೀನಿವಾಸ್, ಲೆಕ್ಕಪರಿಶೋಧಕರು<br>4. ಶ್ರೀಖಾಜಾಮೊಹಿನುದ್ದೀನ್, ಲೆಕ್ಕಪರಿಶೋಧಕರು<br>7 ಪುನರ್ ಪರಿಶೀಲನಾ ಅಧಿಕಾರಿಗಳ : ಶ್ರೀ ಕೆ.ಎಸ್. ಶಶಿಧರ, ಉಪನಿಯಂತ್ರಕರುಹೆಸರು ಮತ್ತು ಹುದ್ದೆ<br>8 ಪುನರ್ ಪರಿಶೀಲನಾ ದಿನಾಂಕ .: 20.01.2007 | ಆಕ್ಷೇಪಣೆ ಇರುವುದಿಲ್ಲ. | | |
| 3 | **3. ವಿಶ್ವವಿದ್ಯಾಲಯದ ಆಡಳಿತ ವರ್ಗ:**<br>1 ಕುಲಪತಿಗಳು, ಡಾ. ಬಿ.ಎ. ವಿವೇಕ ರೈ : 01.04.2005 ರಿಂದ 31.03.2006 ವರೆಗೆ<br>2 ಕುಲಸಚಿವರು, ಡಾ. ಬಿ.ಕೆ. ಕರೀಗೌಡ : 01.04.2005 ರಿಂದ 31.03.2006<br>3 ಹಣಕಾಸು ಅಧಿಕಾರಿಗಳು, ಶ್ರೀ ಸಿ.ಎ. ಶಿವಪ್ಪ : 01.04.2005 ರಿಂದ 31.03.2006<br>4 ಪ್ರಸಾರಾಂಗ ನಿರ್ದೇಶಕರು, ಶ್ರೀಮಲ್ಲೇಪುರಂ .ಜಿ.ವೆಂಕಟೇಶ್ : 01.04.2005 ರಿಂದ 31.03.2006 | ಆಕ್ಷೇಪಣೆ ಇರುವುದಿಲ್ಲ. | | |



PDF created with pdfFactory trial version www.pdffactory.com

| | | | | |
|---|---|---|---|---|
| | 5 ಅಧ್ಯಯನಾಂಗ ನಿರ್ದೇಶಕರು, ಡಾ.ಟಿ.ಆರ್. ಚಂದ್ರಶೇಖರ್ : 01.04.2005 ರಿಂದ 31.03.2006<br>6 ಮುಖ್ಯ ಗ್ರಂಥಪಾಲಕರು, ಶ್ರೀ ಕೆ.ಎ. ರಾಧಾಕೃಷ್ಣ : 01.04.2005 ರಿಂದ 31.03.2006 ರ ವರೆಗೆ | | | |
| 4 | **4. ಕನ್ನಡ ವಿಶ್ವವಿದ್ಯಾಲಯ ಸಂಕ್ಷಿಪ್ತ ವಿವರಗಳು:**<br>ಕರ್ನಾಟಕ ಸರ್ಕಾರದ 1991ರ ಅಧಿನಿಯಮ ಸಂಖ್ಯೆ 23ರ ಅಡಿಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಸ್ಥಾಪಿತವಾಗಿದೆ. ಕನ್ನಡ ಭಾಷಾ ಮತ್ತು ಸಾಹಿತ್ಯದಲ್ಲಿ ಜ್ಞಾನವನ್ನು ವೃದ್ಧಿಪಡಿಸಲು ಸಂಶೋಧನೆಯನ್ನು ಮುಂದುವರೆಸಲು ಮತ್ತು ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸಲು ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಈ ಬಗ್ಗೆ ಪರಿನಿಯಮದ ಉದ್ದೇಶಗಳನ್ನು ಅಧ್ಯಾಯ–2 ಪ್ರಕರಣ–4ರಲ್ಲಿ ವಿವರವಾಗಿ ತಿಳಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯವು 01.11.1991ರಿಂದ ಅಸ್ತಿತ್ವಕ್ಕೆ ಬಂದಿರುತಯ್ತುದೆ. 2005–06ನೇ ಸಾಲಿನಲ್ಲಿ ಯುಜಿಸಿ ಮತ್ತು ಇತರೆ ಸಂಸ್ಥೆಗಳಿಂದ ಬಂದ ಅನುದಾನವನ್ನು ಉಪಯೋಗಿಸಲು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತಾರೆ, ಅಧ್ಯಾಯ–2 ಪ್ರಕರಣ–4ರಲ್ಲಿ ಸೂಚಿಸಿರುವ ಕಾರ್ಯಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಇನ್ನು ಮುಂದೆ ವಿಶ್ವವಿದ್ಯಾಲಯದ ಉದ್ದೇಶಗಳನ್ನು ಪಾಲಿಸುವಲ್ಲಿ ಹೆಚ್ಚಿನ ಆಸಕ್ತಿವಹಿಸುಲು ಸೂಚಿಸಲಾಗಿದೆ. | ಆಕ್ಷೇಪಣೆಯಲ್ಲಿ ವ್ಯಕ್ತಪಡಿಸಿರುವಂತೆ ಕ್ರಮವಹಿಸಲಾಗುವುದು. | | |
| 5 | **5. ಹಿಂದಿನ ಲೆಕ್ಕ ತನಿಖಾ ವರದಿಗಳಿಗೆ ಅನುಪಾಲನ ವರದಿ ಬಗ್ಗೆ.**<br>ವಿಶ್ವವಿದ್ಯಾಲಯದ ಲೆಕ್ಕ ತಪಾಸಣೆಯನ್ನು 1991–92 ರಿಂದ 2004–05ನೇ ಸಾಲಿನವರೆಗೆ ಕೈಗೊಂಡಿದ್ದು ಲೆಕ್ಕ ತಪಾಸಣೆ ವರದಿಗಳನ್ನು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ 1991ರ ಸೆಕ್ಷನ್ 26(3)ರ ಪ್ರಕಾರ ವಿಶ್ವವಿದ್ಯಾಲಯಕ್ಕೆ ಕಳುಹಿಸಲ್ಪಟ್ಟಿದ್ದು. ಈ ವರದಿಗಳನ್ನು ಸೆಕ್ಷನ್ 26ಎ(20)ರಂತೆ ಕ್ರಮಕೈಗೊಳ್ಳಲು ಸೂಚಿಸಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ. ಹಿಂದಿನ ತಪಾಸಣೆ ವರದಿಗಳಿಗೆ ನಿಗದಿತ ನಮೂನೆಯಲ್ಲಿ ಉತ್ತರಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಉತ್ತರಗಳನ್ನು ಪರಿಶೀಲಿಸಲು ಸಾಧ್ಯವಾಗಲಿಲ್ಲ. ಈ ವಿಷಯವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದು ಮುಂದಿನ ಸಾಲಿನಲ್ಲಿ ನಿಗದಿತ ನಮೂನೆಯಲ್ಲಿ ಉತ್ತರಗಳನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿದ್ದಾರೆ.<br>**ನಗದು ಹಣ ಪರಿಶೀಲನೆ :**<br>ದಿನಾಂಕ 21.08.06ರಂದು ನಗದನ್ನು ಪರಿಶೀಲಿಸಲಾಗಿ ರೂ.11700.00 ಇದ್ದು ನಗದು ಪುಸ್ತಕ ಶಿಲ್ಕುಗೆ ತಾಳೆಯಿರುತ್ತದೆ.<br>**ಅಂಚೆ ಚೀಟಿಗಳ ಪರಿಶೀಲನೆ :**<br>ದಿನಾಂಕ: 21.08.2006 ರಂದು ಅಂಚೆ ಚೀಟಿಗಳನ್ನು ಪರಿಶೀಲಿಸಲಾಗಿ ರೂ./2233.00 ಇದ್ದು ಪುಸ್ತಕ ಶಿಲ್ಕುಗೆ ತಾಳೆಯಿರುತ್ತದೆ.<br>**ರಸೀದಿ ಪುಸ್ತಕಗಳ ಭೌತಿಕ ಪರಿಶೀಲನೆ :**<br>ಪ್ರಸಾರಾಂಗ ನಗದು ರಸೀದಿ ಪುಸ್ತಕಗಳು : 19<br>ಪ್ರಸಾರಾಂಗ ಸಾಲ ರಸೀದಿ ಪುಸ್ತಕ : 10<br>ಪ್ರಸಾರಾಂಗ ನಿಯತಕಾಲಿಕೆ ನಗದು ರಸೀದಿ : 06<br>ಪ್ರಸಾರಾಂಗ ನಿಯತಕಾಲಿಕೆ ಸಾಲ ರಸೀದಿ : 04<br>ಪ್ರಸಾರಾಂಗ ಪತ್ಯ ಪುಸ್ತಕ ಪಾವತಿ ರಸೀದಿ : 08<br>ಪ್ರಸಾರಾಂಗ ಬೇಡಿಕೆ ಪತ್ಯ ಪುಸ್ತಕಗಳು : 03<br>ಸಾಮಾನ್ಯ ರಸೀದಿ ಪುಸ್ತಕಗಳು : 82 | ವಿಶ್ವವಿದ್ಯಾಲಯದ ಲೆಕ್ಕ ತಪಾಸಣೆಯ ವರದಿ 1991–92ರಿಂದ 1999–2000ದ ವರೆಗೆ ಬಾಕಿ ಉಳಿದಿರುವ ಪ್ಯಾರಗಳಿಗೆ ಅನುಪಾಲನ ವರದಿಯನ್ನು ಕನ್ನಡ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ ಕವಿಹಂ:ಹವಿ:2005–06 ದಿನಾಂಕ 19.11.2005ರ ಪ್ರಕಾರ ಸೂಕ್ತ ಕ್ರಮಕ್ಕಾಗಿ ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಬಳ್ಳಾರಿ ಇವರಿಗೆ ಕಳುಯಿಸಿಲಾಗಿದೆ.<br>2000–01 ರಿಂದ 2005–06 ಸಾಲಿನವರೆಗೆ ಲೆಕ್ಕ ತಪಾಸಣಾ ವರದಿಯ ಬಾಕಿ ಉಳಿದಿರುವ ಪ್ಯಾರಗಳಿಗೆ ಈಗ ಅನುಪಾಲನ ವರದಿಯನ್ನು ಸಿದ್ಧ ಪಡಿಸಿ ಕಳುಹಿಸಿಕೊಡಲಾಗಿದೆ. ಕಾರಣ ಈ ಪ್ಯಾರವನ್ನು ಕೈಬಿಡಲು ಕೋರಲಾಗಿದೆ.. | | |



PDF created with pdfFactory trial version www.pdffactory.com

| | | | | |
|---|---|---|---|---|
| | ದಿನಾಂಕ 21.08.06 ರಂದು ರಸೀದಿ ಪುಸ್ತಕಗಳ ದಾಸ್ತನು ಮೇಲಿನಂತೆ ಪರಿಶೀಲಿಸಲಾಗಿದ್ದು, ಇದು ಪುಸ್ತಕದ ಶಿಲ್ಕಿಗೆ ತಾಳೆಯಾಗಿರುತ್ತದೆ. | | | |
| 6 | **6. ಮುಂಗಡ ಪತ್ರ**<br>2005–06ನೇ ಸಾಲಿನ ಮುಂಗಡ ಪತ್ರವನ್ನು ದಿನಾಂಕ 06–01–2005 ರಂದು ಅನುಮೊದಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ. (ರೂ. ಲಕ್ಷಗಳಲ್ಲಿ)<br>\| \| \| **ಆದಾಯ** \| **ವೆಚ್ಚ** \|<br>\| 1 \| ಯೋಜನೇತರ \| 593.50 \| 708.50 \|<br>\| 2 \| ಯೋಜನೆ \| 770.15 \| 672.95 \|<br>\| 3 \| ಋಣ ಶೀರ್ಷಿಕೆಗಳು \| 054.95 \| 55.30 \|<br>\| \| **ಮೊತ್ತ** \| 1,418.60 \| 1,436.75 \|<br>\| \| **ಕೊರತೆ** \| – \| 18.15 \|<br><br>**2005–06 ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯದ ಆಯವ್ಯಯ ಅಂದಾಜನ್ನು ದಿನಾಂಕ 10.01.2005 ರಂದು ಈ ಕೆಳಕಂಡವರಿಗೆ ಕಳುಹಿಸಲಾಗಿದೆ.**<br>1. ಆಂತರಿಕ ಆರ್ಥಿಕ ಸಲಹೆಗಾರರು ಶಿಕ್ಷಣ ಮತ್ತು ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.<br>2. ಕಾರ್ಯದರ್ಶಿ, ಯೋಜನಾ ವಿಭಾಗ, ಕನ್ನಡ ಸಂಸ್ಕೃತಿ ಸಚಿವಾಲಯ, ಬೆಂಗಳೂರು.<br>3. ಕಾರ್ಯದರ್ಶಿ ಶಿಕ್ಷಣ ಇಲಾಖೆ, ಬೆಂಗಳೂರು.<br>4. ಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು. | ಆಕ್ಷೇಪಣೆ ಇರುವುದಿಲ್ಲ. | | |
| 7 | **ಆರ್ಥಿಕ ಪರಿಸ್ಥಿತಿ:**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯ 2005–06ನೇ ಸಾಲಿನ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿದೆ.<br>**ಸಾಮಾನ್ಯ ನಗದು ಪುಸ್ತಕ** :<br>01.04.2005 ಕ್ಕೆ ಪ್ರಾರಂಭ ಶಿಲ್ಕು — 041,65,883.19<br>2005–06 ಜಮಾ — 3,97,96,064.24<br>**ಒಟ್ಟು** — **4,39,61,947.43**<br>2005–06 ಖರ್ಚು — 3,22.01,150.57<br>ಅಂತಿಮ ಶಿಲ್ಕು — 1,17,60,796.86<br><br>**ಸಾಮಾನ್ಯ ನಗದು ಪುಸ್ತಕ** :<br>ಪಾಸ್ ಪುಸ್ತಕದ ಅಂತಿಮ ಶಿಲ್ಕು — 1,32,31,817.86<br>ನಗದು ಪುಸ್ತಕದ ಅಂತಿಮ ಶಿಲ್ಕು — 1,17,60,796.86<br>**ವ್ಯತ್ಯಾಸ** — 014,71,021.00 | ಆಕ್ಷೇಪಣೆ ಇರುವುದಿಲ್ಲ. | | |



PDF created with pdfFactory trial version www.pdffactory.com

| | | | | |
|---|---|---|---|---|
| | **ಕಾರಣಗಳು:**<br>ನಗದಾಗದೇ ಇರುವ ಚೆಕ್‌ಗಳ ವಿವರ 14,38,836.00<br>ಅನುಬಂಧ–2 ರಲ್ಲಿ +32,185.00<br>**ಒಟ್ಟು** **14,71,021.00**<br><br>**ಸಮಗ್ರ**<br>ಪ್ರಾರಂಭದ ಶಿಲ್ಕು 03,32,61,353.14<br>**ಜಮಾ** 19,19,95,766.75<br>**22,52,57,119.89**<br>**ಒಟ್ಟು**<br><br>**ಖರ್ಚು** 17,70,53,404,57<br>ಅಂತಿಮ ಶಿಲ್ಕು 04,82,03,715.32<br>ಪಾಸ್ ಪುಸ್ತಕದ ಅಂತಿಮ ಶಿಲ್ಕು 04,01,87,084.46<br>**ವ್ಯತ್ಯಾಸ** **80,16,630.86**<br><br>**ವಿವರಗಳು**<br>ಲೇವಣಿಗಳು 1,58,64,851.61<br>ಜಮಾ ಆಗದಿರುವುದು 1,80,292.00<br>ಬ್ಯಾಂಕ್ ಚಾರ್ಜಸ್ 36.00<br>**1,60,45,179.61**<br>**ಒಟ್ಟು**<br><br>**ಕಳೆಯಿರಿ:**<br>ನಗದಾಗದ ಚೆಕ್ಕುಗಳು 80,16,142.00<br>ಹೆಚ್ಚಿಗೆ ಜಮಾ 12,406.75<br>**ಒಟ್ಟು** **(–)80,28,548.75**<br>**80,16,630.86**<br><br>ಲೇವಣಿಗಳನ್ನು ಜಮದಲ್ಲಿ ತೆಗೆದುಕೊಂಡಿರುವುದರಿಂದ ನಗದು ಪುಸ್ತಕದ ಶಿಲ್ಕು ಹೆಚ್ಚಾಗಿದೆ. | | | |
| 8 | **ವರ್ಗೀಕೃತ ಜಮಾ ಖರ್ಚಿನ ವಹಿ:**<br>ವರ್ಗೀಕೃತ ಜಮಾ ಖರ್ಚಿನ ವಹಿಯನ್ನು ನಿರ್ವಹಿಸಲಾಗಿದೆ. ವಿವರಗಳನ್ನು ಅನುಬಂಧ–3ರಲ್ಲಿ ನೀಡಿದೆ. | ಆಕ್ಷೇಪಣೆ ಇರುವುದಿಲ್ಲ. | | |



PDF created with pdfFactory trial version www.pdffactory.com

| | | | | |
|---|---|---|---|---|
| 9 | **ವಾರ್ಷಿಕ ಲೆಕ್ಕಪತ್ರಗಳು**<br>2005–06ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸಿ ಹಣಕಾಸು ಸಮಿತಿಯಲ್ಲಿ ದಿನಾಂಕ 17–11–2006ರಲ್ಲಿ ಅನುಮೋದಿಸಲಾಗಿದೆ. ಸರ್ಕಾರದ ಲೆಕ್ಕ ಪರಿಶೋಧರಿಗೆ ನಂತರ ಕಳುಹಿಸುವುದಾಗಿ ತಿಳಿಸಿದ್ದಾರೆ. | | | |
| 10 | **ಗುತ್ತಿಗೆದಾರರ ಠೇವಣಿ :**<br>2005–06ನೇ ಸಾಲಿನಲ್ಲಿ ಗುತ್ತಿಗೆದಾರರ ಠೇವಣಿಯನ್ನು ನಿರ್ವಹಿಸಿ ಹಾಜರುಪಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿದೆ.<br>01.04.05ಕ್ಕೆ ಪ್ರಾರಂಭ ಶಿಲ್ಕು 16,54,534.00<br>2005–06ರಲ್ಲಿ ಜಮಾ 09,94,124.00<br>**ಒಟ್ಟು 26,48,658.00**<br>01.04.05ಕ್ಕೆ ಪ್ರಾರಂಭ ಶಿಲ್ಕು **16,54,534.00**<br>2005–06ರಲ್ಲಿ ಜಮಾ 09,94,124.00<br>**26,48,658.00**<br>**ಒಟ್ಟು**<br>2005–06ನೇ ಮರುಪಾವತಿ 10,83,517.00<br>**ಅಂತಿಮ ಶಿಲ್ಕು** 15,65,141.00 | ಆಕ್ಷೇಪಣೆ ಇರುವುದಿಲ್ಲ. | | |
| 11 | **ಭದ್ರತಾ ಠೇವಣಿ**<br>2005–06ರಲ್ಲಿ ಹಣಕಾಸು ಮೊತ್ತ ನಿರ್ವಹಣೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು/ ಸಿಬ್ಬಂದಿಗಳಿಂದ ಹಾಗೂ ವಾಹನ ಚಾಲಕರಿಂದ ಪಡೆದ ಭದ್ರತಾ ಠೇವಣಿಗಳ ವಿವರ ಈ ಕೆಳಗಿನಂತಿದೆ.<br>1 ಶ್ರೀ ಜೈನುಲ್ಲಾ ಬಳ್ಳಾರಿ, ಸಹಾಯಕ ನಿರ್ದೇಶಕರು 1000.00<br>2 ಶ್ರಿ ಜೆ.ಆರ್. ರಾಮಮೂರ್ತಿ, ಗ್ರಂಥಪಾಲಕರು 1000.00<br>3 ಶ್ರೀ ಎ. ವೆಂಕಟೇಶ, ಸಹಾಯಕ ಕುಲಸಚಿವರು 1000.00<br>4 ಶ್ರೀ ಪ್ರೇಮಕುಮಾರ, ಸಹಾಯಕ ಕುಲಸಚಿವರು 1000.00<br>5 ಶ್ರೀ ಕೆ.ಎಸ್. ಮರಿಸ್ವಾಮಿ, ಕಿರಿಯ ಸಹಾಯಕರು 1000.00<br>6 ಶ್ರೀ ಕೆ.ಹೆಚ್.ಕಟ್ಟಿ, ಯೋಜನಾಧಿಕಾರಿಗಳು 1000.00<br>7 ಶ್ರೀ.ಈ.ಟಿ. ನಾಗರಾಜ, ಅಧೀಕ್ಷಕರು 1000.00<br>8 ಶ್ರೀ. ರಹಮತ್ ಉಲ್ಲಾ, ವಾಹನ ಚಾಲಕ 1000.00<br>9 ಶ್ರೀ ಪುಟ್ಟಮಾದಯ್ಯ, ವಾಹನ ಚಾಲಕ 1000.00<br>10 ಶ್ರೀ ಕೆ. ಶಿವಾನಂದ, ವಾಹನ ಚಾಲಕ 1000.00<br>11 ಶ್ರಿ. ವಿ.ಸಿ. ರತ್ನಾಕರ, ವಾಹನ ಚಾಲಕ 1000.00<br>12 ಶ್ರಿ. ಎರ್ರಿಸ್ವಾಮಿ, ವಾಹನ ಚಾಲಕ 1000.00 | ಆಕ್ಷೇಪಣೆ ಇರುವುದಿಲ್ಲ. | | |
| 12 | 12. **ಸಾಲಗಳು (ಬೋಧಕ ಸಿಬ್ಬಂದಿ ವಸತಿ ಗೃಹಗಳಿಗೆ ಸಾಲ)**<br>ಹುಡ್ಕೋದಿಂದ ಮೊದಲಿಗೆ ಸಾಲ ಪಡೆದಿದ್ದು, ಬಡ್ಡಿ ಹೆಚ್ಚಿದ್ದ ಕಾರಣ ಅದನ್ನು ಮುಕ್ತಾಯಗೊಳಿಸಿ ಬ್ಯಾಂಕ್ ಆಫ್ | ಆಕ್ಷೇಪಣೆ ಇರುವುದಿಲ್ಲ. | | |



PDF created with pdfFactory trial version www.pdffactory.com

| | | | | |
|---|---|---|---|---|
| | ಇಂಡಿಯಾ, ಕಮಲಾಪುರದಲ್ಲಿ ಡಿಸೆಂಬರ್ 2003ರಲ್ಲಿ ಸಾಲ ಪಡೆಯಲಾಗಿದೆ. 2005–06ನೇ ಸಾಲಿನಲ್ಲಿ ಸಾಲದ ವಹಿಯನ್ನು ನಿರ್ವಹಿಸಿದ್ದು ವಿವರಗಳು ಈ ಕೆಳಕಂಡಂತಿದೆ.<br>**ವಸತಿ ಗೃಹ ನಿರ್ಮಾಣಕ್ಕಾಗಿ ವಿಶ್ವವಿದ್ಯಾಲಯದ ಪಡೆದ ಸಾಲ**<br>ಪ್ರಾರಂಭ ಶಿಲ್ಕು 24,21,432.00<br>2005–06ರಲ್ಲಿ ಪಡೆದ ಸಾಲ –<br>ಬಡ್ಡಿ 2,48,404.00<br>ಒಟ್ಟು 26,69,836.00<br>2005–06 ರಲ್ಲಿ ಮರುಪಾವತಿ<br>ಸಾಲ 4,51,596.00<br>ಬಡ್ಡಿ 2,48,404.00<br>07,00,000.00<br>31.03.06 ಕ್ಕೆ ಅಂತಿಮ ಶಿಲು **19,69,836.00** | | | |
| 13 | **ಮುಂಗಡಗಳು:**<br>2005–06 ನೇ ಸಾಲಿನ ಮುಂಗಡಗಳ ವಿವರಗಳು ಈ ಕೆಳಗಿನಂತಿವೆ.<br>01.04.05 ಕ್ಕೆ ಪ್ರಾರಂಭ ಶಿಲ್ಕು 5,70,659.00<br>2005–06 ರಲ್ಲಿ ಮುಂಗಡ ನೀಡಿದ್ದು 33,14,830.00<br>**ಒಟ್ಟು 38,85,489.00**<br>2005–06ರಲ್ಲಿ ಹೊಂದಾಣಿಕೆ 27,41,994.00<br>**ಅಂತಿಮ ಶಿಲ್ಕು 11,43,495.00**<br><br>ಇತರೇ ಮುಂಗಡಗಳು(ಯುಜಿಸಿ ಕಾರ್ಯಕ್ರಮಗಳು, ಪೀಠಗಳು, ದತ್ತಿನಿಧಿ)<br>ಪ್ರಾರಂಭ ಶಿಲ್ಕು 6,12,250.00<br>2005–06ರಲ್ಲಿ ನೀಡಿದ ಮುಂಗಡ 17,34,574.00<br>**ಒಟ್ಟು 23,46,824.00**<br>2005–06ರಲ್ಲಿ ಹೊಂದಾಣಿಕೆ 9,82,129.00<br>ಅಂತಿಮ ಶಿಲ್ಕು 13,64,695.00<br><br>**ಹಬ್ಬದ ಮುಂಗಡ**<br>ಪ್ರಾರಂಭದ ಶಿಲ್ಕು 2,03,600.00<br>ಪಾವತಿಸಿದ ಮೊತ್ತ 2,56,000.00<br>**ಒಟ್ಟು 4,59,600.00** | ಆಕ್ಷೇಪಣೆ ಇರುವುದಿಲ್ಲ. | | |



PDF created with pdfFactory trial version www.pdffactory.com

| | | | | |
|---|---|---|---|---|
| | 2005–06ರಲ್ಲಿ ಮುರುವಳಿ 2,96,800.00<br>ಅಂತಿಮ ಶಿಲ್ಕು 1,62,800.00 | | | |
| 14 | **ಪ್ರಸಾರಾಂಗದ ಮುಂಗಡ** :<br>ಪ್ರಾರಂಭದ ಶಿಲ್ಕು 41,639.00<br>2005.06ರಲ್ಲಿ ಮುಂಗಡ ನೀಡಿದ್ದು 1,75,350.00<br>**ಒಟ್ಟು** **2,16,989.00**<br>2005–06ನೇ ಹೊಂದಾಣಿಕೆ 1,93,489.00<br>ಅಂತಿಮ ಶಿಲ್ಕು 23,500.00 | ಆಕ್ಷೇಪಣೆ ಇರುವುದಿಲ್ಲ. | | |
| 15 | **ಬಾಕಿ ಇರುವ ಮುಂಗಡಗಳನ್ನು ಹೊಂದಾಣಿಕೆ ಮಾಡದೇ ಇರುವುದು:**<br>ಈ ವರದಿಗೆ ಲಗತ್ತಿಸಿರುವ ಅನುಬಂಧ–4ರಲ್ಲಿ ಬಾಕಿ ಇರುವ ಮುಂಗಡಗಳ ವಿವರಗಳನ್ನು ಸಲ್ಲಿಸಲಾಗಿದೆ. ಹಳೆಯ ಮುಂಗಡಗಳು ಹಾಗೆಯೇ ಮುಂದುವರಿಯುತ್ತಲಿವೆ. ಈ ಬಗ್ಗೆ ಹಿಂದಿನ ಲೆಕ್ಕ ತಪಾಸಣಾ ವರದಿಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದರೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–243ರ ಪ್ರಕಾರ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ಈಗಾಗಲೇ ಪ್ರತಿಶತ 90ರಷ್ಟು ಮುಂಗಡಗಳು ಹೊಂದಾಣಿಕೆಯಾಗಿದ್ದು, ಉಳಿದ ಮುಂಗಡಗಳ ಹೊಂದಾಣಿಕೆಗೆ ಕ್ರಮವಹಿಸಲಾಗಿದೆ. 2006–07ನೇ ಸಾಲಿನ ಆಡಿಟ್ ತಪಾಸಣೆಯ ಸಮಯದಲ್ಲಿ ಈ ಹೊಂದಾಣಿಕೆಗಳನ್ನು ಪರಿಶೀಲಿಸಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | | |
| 16 | **ಅವಶ್ಯಕತೆಗಿಂತ ಹೆಚ್ಚಿಗೆ ಮುಂಗಡ ಪಡೆದಿದ್ದು, ಉಳಿದ ಮುಂಗಡ ಹಣವನ್ನು ತಡವಾಗಿ ಹಿಂತಿರುಗಿಸಿರುವ ಬಗ್ಗೆ.**<br>ಹಿಂದಿನ ತನಿಖಾ ವರದಿ ಕಂಡಿಕೆ ಸಂಖ್ಯೆ–18ರಲ್ಲಿ ತಿಳಿಸಿದಂತೆ ಇಲಾಖೆ ಮುಖ್ಯಸ್ಥರು ಅವಶ್ಯಕತೆಗಿಂತ ಹೆಚ್ಚಿಗೆ ಮುಂಗಡ ಹಣ ಪಡೆದು ವಿಳಂಬವಾಗಿ ಉಳಿದ ಮುಂಗಡದ ಮೊತ್ತವನ್ನು ವಾಪಸ್ಸು ನೀಡಿರುವುದು ಕಂಡು ಬಂದಿದೆ. ಇದೇ ತರಹದ ನ್ಯೂನ್ಯತೆಗಳನ್ನು 2005–06ನೇ ಸಾಲಿನಲ್ಲಿಯೂ ಸಹಾ ಮುಂದುವರೆಸಲಾಗಿದೆ. ಈ ಬಗ್ಗೆ ಕ್ರಮಕೈಗೊಂಡು ಇನ್ನೂ ಮುಂದೆ ಅಗತ್ಯವಿರುವಷ್ಟು ಮುಂಗಡ ಮಾತ್ರ ನೀಡಲು ಸೂಚಿಸಿದೆ. | ಇಲಾಖೆ ಮುಖ್ಯಸ್ಥರು ಅವಶ್ಯಕತೆಗಿಂತ ಹೆಚ್ಚಿಗೆ ಮುಂಗಡ ಹಣ ಪಡೆದು ವಿಳಂಬವಾಗಿ ಉಳಿದ ಮುಂಗಡದ ಮೊತ್ತವನ್ನು ವಾಪಸ್ಸು ಮಾಡುವುದನ್ನು ಈಗ ಕಟ್ಟುನಿಟ್ಟಾಗಿ ನಿಯಂತ್ರಿಸಲಾಗಿದೆ. ಅವಶ್ಯಕತೆ ಇರುವಷ್ಟೇ ಮೊತ್ತದ ಮುಂಗಡವನ್ನು ಪಡೆದು ಕಾಲಮಿತಿಯೊಳಗೆ ಹೊಂದಾಣಿಕೆಗೆ ಸಲ್ಲಿಸಲು ಆದೇಶ ನೀಡಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | | |
| 17 | **ಹೂಡಿಕೆಗಳು**<br>2005–06ನೇ ಸಾಲಿನ ಹೂಡಿಕೆಯ ವ್ಯವಹಾರ ಈ ಕೆಳಕಂಡಂತಿವೆ.<br><br>ಪ್ರಾರಂಭದ ಶಿಲ್ಕು 1,74,20,300.00<br>2005–06 ರಲ್ಲಿ ಹೂಡಿಕೆ 48,50,000.00<br>**ಬಡ್ಡಿ ಜಮಾ** **2,22,70,3000.00**<br>16,51,896.00<br>2,39,22.196.00 | ಆಕ್ಷೇಪಣೆ ಇರುವುದಿಲ್ಲ. | | |



PDF created with pdfFactory trial version www.pdffactory.com

| | | | | |
|---|---|---|---|---|
| | 2005–06ರಲ್ಲಿ ವಾಪಸ್ಸು 85,57,344.00<br>ಅಂತಿಮ ಶಿಲ್ಕು 1,53,64,852.00<br><br>ವಿವರಗಳನ್ನು ಅನುಬಂಧ 5 ರಲ್ಲಿ ನೀಡಿದೆ. | | | |
| 18 | **ಅನುದಾನಗಳು** :<br>2005–06ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ–6ರಲ್ಲಿ ನೀಡಿದೆ. | ಆಕ್ಷೇಪಣೆ ಇರುವುದಿಲ್ಲ. | | |
| 19 | **ಕರಕುಶಲ ಮಾರಾಟ ಕೇಂದ್ರದಿಂದ ನೇರವಾಗಿ ರಸೀದಿ ಪುಸ್ತಕಗಳನ್ನು ಮುದ್ರಿಸಿಗೊಂಡಿರುವುದು.**<br>ದಿನಾಂಕ 19.11.2005ರಲ್ಲಿ ಕರಕುಶಲ ಮಾರಾಟ ಕೇಂದ್ರವು ನೇರವಾಗಿ ಪ್ರವೇಶ ಶುಲ್ಕದ–40 ಪುಸ್ತಕಗಳು ಮತ್ತು ಮ್ಯೂಸಿಯಂನ–30 ರಸೀದಿ ಪುಸ್ತಕಗಳನ್ನು ಪಡೆದಿರುತ್ತಾರೆ. ಇದರ ದಾಸ್ತನು ಪುಸ್ತಕಗಳನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ಪಡೆದ ರಸೀದಿ ಪುಸ್ತಕಗಳ ಪೂರ್ಣ ವಿವರಗಳು ತಿಳಿಯುತ್ತಿಲ್ಲ. ಆದ್ದರಿಂದ ರಸೀದಿ ಪುಸ್ತಕಗಳ ಮುದ್ರಣ ಖರೀದಿಯನ್ನು ಲೆಕ್ಕ ಪತ್ರ ಶಾಖೆಯಿಂದ ನಿರ್ವಹಿಸಿ ಉಳಿದ ವಿಭಾಗಗಳಿಗೆ ಸರಬರಾಜು ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ. | ರಸೀದಿ ಪುಸ್ತಕಗಳ ಮುದ್ರಣ ಖರೀದಿಯನ್ನು ಲೆಕ್ಕ ಪತ್ರ ಶಾಖೆಯಿಂದ ನಿರ್ವಹಿಸಿ ಉಳಿದ ವಿಭಾಗಗಳಿಗೆ ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗಿದ್ದು, 2006–07ನೇ ಸಾಲಿನ ಆಡಿಟ್ ತಪಾಸಣೆಯ ಸಮಯದಲ್ಲಿ ಇವುಗಳನ್ನು ಪರಿಶೀಲಿಸಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | | |
| 20 | **ಮಹಿಳಾ ಅಧ್ಯಯನ ಕೇಂದ್ರಕ್ಕೆ ಪೀಠೋಪಕರಣಗಳನ್ನು ಖರೀದಿಸಿರುವ ಬಗ್ಗೆ**<br>ಮಹಿಳಾ ಅಧ್ಯಯನ ಕೇಂದ್ರಕ್ಕೆ ಈ ಕೆಳಕಂಡ ದಿನಾಂಕಗಳಂದು ಪೀಠೋಪಕರಣಗಳನ್ನು ಖರೀದಿಸಲಾಗಿದೆ. ಇಂಡಿಯಾ ಲ್ಯಾಬ್ ಅಂಡ್ ಸರ್ವಿಸಸ್, ಹೊಸಪೇಟೆ<br>27.10.2005 55,791.00<br>22.11.2005 13,892.00<br>07.03.2006 98,351.00<br>ಒಟ್ಟು 1,68,034.00<br><br>ಪೀಠೋಪಕರಣಗಳನ್ನು ವಿಶ್ವವಿದ್ಯಾಲಯದಿಂದ ಖರೀದಿಸಲಾಗಿದೆ. ಪೀಠೋಪಕರಣಗಳ ಖರೀದಿಗೆ ಮಹಿಳಾ ಅಧ್ಯಯನ ಕೇಂದ್ರದವರು ಬೇಡಿಕೆ ಸಲ್ಲಿಸಿರುವುದಿಲ್ಲ. ಇದು ಯು.ಜಿ.ಸಿ ಕಾರ್ಯಕ್ರಮವಾಗಿದ್ದು, ಯುಜಿಸಿಯು ಪೀಠೋಪಕರಣ ಖರೀದಿಸಲು ತಿಳಿಸಿರುವುದಿಲ್ಲ. ಆದ್ದರಿಂದ ಖರೀದಿಯು ಕ್ರಮಬದ್ಧವಾಗಿರುವುದಿಲ್ಲ. ಇದಕ್ಕೆ ಸೂಕ್ತ ಸಮಜಾಯಿಷಿ ನೀಡಲು ಸೂಚಿಸಿದೆ. | ಮಹಿಳಾ ಅಧ್ಯಯನ ಕೇಂದ್ರಕ್ಕೆ ಅಗತ್ಯ ಪೀಠೋಪಕರಣಗಳನ್ನು ಸದರೀ ಕೇಂದ್ರ ಕೋರಿಕೆಯಂತೆ (02.07.2005) ಮತ್ತು ಪ್ರಧಾನ ಖರೀದಿ ಸಮಿತಿ ಸಭೆ (9) ದಿನಾಂಕ 05.07.2005ರ ನಿರ್ಣಯ (8) ಹಾಗೂ ಕಾರ್ಯಕಾರಿ ಸಮಿತಿ ಸಭೆ (95) ದಿನಾಂಕ 12.07.2005ರ ನಿರ್ಣಯ (95:15) ರಲ್ಲಿ ಅನುಮೋದನೆ ಪಡೆಯಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | ಲಗತ್ತು–1 | |
| 21 | **ಶಾಸನ ಶಾಸ್ತ್ರ ವಿಭಾಗದಲ್ಲಿ ಐ.ಸಿ.ಹೆಚ್.ಆರ್. ರೂ.25,000.00 ಅನುದಾನ ನೀಡುವ ಬದಲು ರೂ.22,500.00 ಅನುದಾನ ನೀಡಿದ್ದು, ರೂ. 2500.00 ಬಾಕಿ ಐ.ಸಿ.ಹೆಚ್.ಆರ್. ದಿಂದ ಪಡೆಯದಿರುವ ಬಗ್ಗೆ.**<br>2005–06ನೇ ಸಾಲಿನಲ್ಲಿ "Dimension of Epigraphy With particular reference to | ಬಾಕಿ ಅನುದಾನ ರೂ. 2500.00ರ ಬಿಡುಗಡೆಗೆ ಕೋರಿ ಈಗಾಗಲೇ ನವದೆಹಲಿಯ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ | | |



PDF created with pdfFactory trial version www.pdffactory.com

| | | | | |
|---|---|---|---|---|
| | karnataka" ವಿಚಾರ ಸಂಕೀರಣಕ್ಕಾಗಿ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ನ್ಯೂ ದೆಹಲಿ ಪತ್ರ ಸಂಖ್ಯೆ: ಕ್ಯಾಷ್ ಗ್ರಾಂಟ್ 73: ಐ.ಸಿ.ಹೆಚ್.ಆರ್ : 2004–05: 13.07.05ರಲ್ಲಿ: ಚೆಕ್ ಸಂಖ್ಯೆ: 574435, ದಿನಾಂಕ:06.07.2005ರಲ್ಲಿ 22,500.00 ಕನ್ನಡ ವಿಶ್ವವಿದ್ಯಾಲಯಕ್ಕೆ ಕಳುಹಿಸಿದೆ. ಉಳಿದ ರೂ.2500.00 ಕೆಲವು ಷರತ್ತು ಪೂರೈಸಿದ ಬಳಿಕ ಬಿಡುಗಡೆ ಮಾಡುವುದಾಗಿ ತಿಳಿಸಿದ್ದು, ಇದುವರೆಗೆ ರೂ. 2500.00 ಬಿಡುಗಡೆಯಾಗಿರುವುದಿಲ್ಲ. ಕಾರಣ ಐ.ಸಿಹೆಚ್.ಆರ್. ನ್ಯೂ ದೆಹಲಿಗೆ ಪತ್ರ ವ್ಯವಹಾರ ಮಾಡಿ ಬಾಕಿ 2500.00 ಅನುದಾನ ಬಿಡುಗಡೆ ಮಾಡಿಸಲು ಮೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ. | ಇವರಿಗೆ ಪತ್ರ ಬರೆಯಲಾಗಿದೆ. ಆದಷ್ಟು ಶೀಘ್ರದಲ್ಲಿ ಈ ಅನುದಾನವನ್ನು ಪಡೆಯುವ ನಿರೀಕ್ಷೆ ಇದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ | | |
| 22 | **ಪ್ರಸಾರಾಂಗದ ರಸೀದಿ ಪುಸ್ತಕಗಳ ದಾಸ್ತನು ಲೆಕ್ಕ**<br>2005–06ನೇ ಸಾಲಿನ ಪ್ರಸಾರಾಂಗದ ರಸೀದಿ ಪುಸ್ತಕಗಳ ದಾಸ್ತನು ಲೆಕ್ಕ ತನಿಖೆಗೆ ಹಾಜರುಪಡಿಸಿದ್ದು, ವಿವರ ಈ ಕೆಳಕಂಡಂತಿದೆ.<br>**(ಎ) ನಗದು ರಸೀದಿ ಪುಸ್ತಕಗಳು**<br>01.04.05ಕ್ಕೆ ಪ್ರಾರಂಭ ಶಿಲ್ಕು 36<br>2005–06ರಲ್ಲಿ ಖರೀದಿ 50<br>**ಒಟ್ಟು** 86<br>2005–06ರಲ್ಲಿ ಉಪಯೋಗ 55<br>**31–03–06 ಅಂತಿಮ ಶಿಲ್ಕು** 31<br><br>ಕ್ರ.ಸಂ. 1901 ರಿಂದ 5000ವರೆಗೆ 31 ರಸೀದಿ ಪುಸ್ತಕಗಳು<br>**(ಬಿ) ಸಾಲದ ರಸೀದಿ ಪುಸ್ತಕಗಳು**<br>01.04.05ಕ್ಕೆ ಪ್ರಾರಂಭ ಶಿಲ್ಕು 17<br>2005–06ರಲ್ಲಿ ಖರೀದಿ –<br>**ಒಟ್ಟು** 17<br>2005–06ರಲ್ಲಿ ಉಪಯೋಗ 08<br>**31–03–06 ಅಂತಿಮ ಶಿಲ್ಕು** 09<br><br>ಕ್ರ.ಸಂ. 6801 ರಿಂದ 7900 ವರೆಗೆ 9 ರಸೀದಿ ಪಗಸ್ತಕಗಳು<br>01.04.05ಕ್ಕೆ ಪ್ರಾರಂಭ ಶಿಲ್ಕು 10<br>2005–06ರಲ್ಲಿ ಖರೀದಿ –<br>**ಒಟ್ಟು** 10<br>2005–06ರಲ್ಲಿ ಉಪಯೋಗ 04<br>**31–03–06 ಅಂತಿಮ ಶಿಲ್ಕು** 06 | ಆಕ್ಷೇಪಣೆ ಇರುವುದಿಲ್ಲ. | | |



PDF created with pdfFactory trial version www.pdffactory.com

| | | | | |
|---|---|---|---|---|
| | **(ಸಿ) ನಿಯತಕಾಲಿಕೆಗಳು ನಗದು ರಸೀದಿ ಪುಸ್ತಕಗಳು**<br><br>ಕ್ರ.ಸಂ. 4401 ರಿಂದ 5000 ವರೆಗೆ 6 ರಸೀದಿ ಪುಸ್ತಕಗಳು<br>**(ಡಿ) ನಿಯತಕಾಲಿಕೆ ಸಾಲದ ರಸೀದಿ ಪುಸ್ತಕಗಳು**<br>01.04.05ಕ್ಕೆ ಪ್ರಾರಂಭ ಶಿಲ್ಕು 04<br>2005–06ರಲ್ಲಿ ಖರೀದಿ –<br>**ಒಟ್ಟು** 04<br>2005–06ರಲ್ಲಿ ಉಪಯೋಗ –<br>**31–03–06 ಅಂತಿಮ ಶಿಲ್ಕು** 04<br><br>ಕ್ರ.ಸಂ. 402 ರಿಂದ 800 ವರೆಗೆ 4 ರಸೀದಿ ಪುಸ್ತಕಗಳು | | | |
| 23 | **ಪ್ರಸಾರಾಂಗ ವಿಭಾಗದಲ್ಲಿ ದಾಸ್ತನು ಭೌತಿಕ ತಪಾಸಣೆ ವರದಿಯ ನ್ಯೂನತೆಗಳು**<br>2005–06ನೇ ಸಾಲಿನ ಪ್ರಸಾರಾಂಗ ಪುಸ್ತಕ ದಾಸ್ತನು ಮಳಿಗೆಯನ್ನು ಏಪ್ರಿಲ್ 16 ರಂದು ಕೈಗೊಂಡಿದ್ದು ಭೌತಿಕ ತಪಾಸಣೆ ವರದಿಯಲ್ಲಿ ದಿ: 31.03.06ರ ಅಂತ್ಯಕ್ಕೆ ದಾಸ್ತನು ಪುಸ್ತಕ ಪ್ರಕಾರ ಶಿಲ್ಕು ಹಾಗೂ ವಾಸ್ತವಿಕ ಶಿಲ್ಕು ಸರಿಯಾಗಿದೆಯೇ ಅಥವಾ ಕೊರತೆ ಇದೆಯೇ ಎಂಬುದರ ಬಗ್ಗೆ ದೃಢೀಕರಣವಿರುವುದಿಲ್ಲ. ಇದು ದಾಸ್ತನು ಭೌತಿಕ ಪರಿಶೀಲನೆ ನಡೆಸಿದ ಉದ್ದೇಶ ಸಫಲವಾಗಿರುವುದಿಲ್ಲ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:37:2006–07: 26.09.2006 ನೀಡಿದ್ದು ಉತ್ತರವಾಗಿ ಭೌತಿಕ ತಪಾಸಣೆ ಮಾಡುವವರ ದೃಢೀಕರಣವನ್ನು ತೆಗೆದುಕೊಳ್ಳಲಾಗುದೆಂಬ ಉತ್ತರ ನೀಡಿದ್ದು. ಪ್ರಸಾರಾಂಗ ನಿರ್ದೇಶಕರು, ಈ ಬಗ್ಗೆ ಪ್ರಥಮ ಆದ್ಯತೆ ನೀಡಿ ಭೌತಿಕ ತಪಾಸಣೆ ಮಾಡುವವರು ದಾಸ್ತನು ಪುಸ್ತಕದ ಶಿಲ್ಕು ಹಾಗೂ ವಾಸ್ತವಿಕ ಶಲ್ಕು ಸರಿಯಾಗಿದೆಯೆಂಬುದರ ಬಗ್ಗೆ ದೃಢೀಕರಣ ನೀಡಲು ಸೂಕ್ತ ಕ್ರಮ ವಹಿಸಲು ಸೂಚಿಸಿದೆ. | ಪ್ರಸಾರಾಂಗದ ಪುಸ್ತಕ ದಾಸ್ತನು ಮಳಿಗೆಯ ಭೌತಿಕ ಪರಿಶೀಲನೆಯನ್ನು ಏಪ್ರಿಲ್ 2006ರಲ್ಲಿಯೇ ಜರುಗಿಸಲಾಗಿದ್ದು ವರದಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಲಾಗಿತ್ತು. ಲೆಕ್ಕ ತಪಾಸಣಾಧಿಕಾರಿಗಳು ಸೂಚಿಸಿರುವಂತೆ ಭೌತಿಕ ತಪಾಸಣೆ ನಡೆಸುವವರ ದೃಢೀಕರಣವನ್ನು ತೆಗೆದುಕೊಳ್ಳಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ | | |
| 24 | **ಪ್ರಸಾರಾಂಗ ವಿಭಾಗದಲ್ಲಿ ಸರಸ್ವತಿ ಮಾರಾಟ ಮಳಿಗೆಯ ಹಾಗೂ ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಭೌತಿಕ ಪರಿಶೀಲನೆ ಮಾಡದಿರುವ ಬಗ್ಗೆ.**<br>2005–06ನೇ ಸಾಲಿನನಲ್ಲಿ ದಿನಾಂಕ:31.03.06 ಅಂತ್ಯಕ್ಕೆ ಸರಸ್ವತಿ ಮಾರಾಟ ಮಳಿಗೆ ಹಾಗೂ ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಪುಸ್ತಕಗಳ ದಾಸ್ತಾನು ಭೌತಿಕ ಪರಿಶೀಲನೆ ಮಾಡದಿರುವುದು ಕಂಡು ಬಂದಿದೆ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಪತ್ರ ಸಂಖ್ಯೆ: 38, 2006.07, ದಿನಾಂಕ:26.09.2006ರಲ್ಲಿ ವಿಚಾರಣೆ ಪತ್ರ ನೀಡಿದ್ದು. ಉತ್ತರವಾಗಿ ಮುಂದೆ ಭೌತಿಕ ಪರಿಶೀಲನೆ ಪಡೆಸಲಾಗುವುದು ಎಂದು ಉತ್ತರ ನೀಡಿದ್ದಾರೆ. ಭೌತಿಕ ಪರಿಶೀಲನೆ | ಪ್ರಸಾರಾಂಗದ ಸರಸ್ವತಿ ಮಾರಾಟ ಮಳಿಗೆ ಮತ್ತು ಬೆಂಗಳೂರು ಮಾರಾಟ ಮಳಿಗೆಗಳ ದಾಸ್ತಾನು ಪುಸ್ತಕಗಳನ್ನು ಲೆಕ್ಕ ತನಿಖೆಯ ಸಂದರ್ಭದಲ್ಲಿ ಹಾಜರು ಪಡಿಸಲಾಗಿತ್ತು. ವರ್ಷಾಂತ್ಯಕ್ಕೆ ದಾಸ್ತಾನು ಪುಸ್ತಕಸದ ಶಿಲ್ಕು ಹಾಗೂ ವಾಸ್ತವ ಶಿಲ್ಕನ್ನು ಭೌತಿಕ ತಪಾಸಣೆ ಮಾಡಿದ ಪೂರ್ಣ ವರದಿಯನ್ನು ಮುಂದಿನ ಆಡಿಟ್ ತಪಾಸಣೆಯ ಸಂದರ್ಭದಲ್ಲಿ ತನಿಖೆಗೆ ಹಾಜರುಪಡಿಸಲಾಗುವುದು. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ | | |



PDF created with pdfFactory trial version www.pdffactory.com

<table>
<tr><td></td><td>ತುಂಬಾ ಮುಖ್ಯವಾಗಿದ್ದು ವರ್ಷಾಂತ್ಯಕ್ಕೆ ದಾಸ್ತಾನು ಪುಸ್ತಕದ ಶಿಲ್ಕು ಹಾಗೂ ವಾಸ್ತವ ಶಿಲ್ಕು ಭೌತಿಕ ಪರಿಶೀಲನೆ ಮಾಡಿ ಪೂರ್ಣ ವರದಿಯನ್ನು ಲೆಕ್ಕ ತನಿಖೆಗೆ ನೀಡಲು ಸೂಚಿಸಿದೆ.</td><td>ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ</td><td></td><td></td></tr>
<tr><td>25</td><td>ಬೆಂಗಳೂರು ಪುಸ್ತಕ ಮಾರಾಟ ಮಳಿಗೆ ಪುಸ್ತಕ ಮಾರಾಟದ ಮೊತ್ತ ಬ್ಯಾಂಕಿಗೆ ತಡವಾಗಿ ಜಮಾ ಮಾಡಿರುವ ಬಗ್ಗೆ<br><br>2005 –06ನೇ ಸಾಲಿನ ಬೆಂಗಳೂರು ಪುಸ್ತಕ ಮಾರಾಟದ ಮಳಿಗೆ ನಗದು ಪುಸ್ತಕ ಮಾರಾಟ ಮಾಡಿದ್ದು ಮೊತ್ತ ವಿಳಂಬವಾಗಿ ಬ್ಯಾಂಕಿಗೆ ಜಮಾ ಮಾಡಿದ ವಿವರ ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ.<br><br>
<table>
<tr><th>ಕ್ರ. ಸಂ</th><th>ರಸೀದಿ ಸಂ</th><th>ದಿನಾಂಕ</th><th>ಮೊತ್ತ</th><th>ಬ್ಯಾಂಕ್ ಚಲನ್ ಸಂ</th><th>ದಿನಾಂಕ</th><th>ಳಂಬದ ದಿನ</th></tr>
<tr><td>1</td><td>17459</td><td>12.05.05</td><td>500.00</td><td>125</td><td>23.05.2005</td><td>11 ದಿನ</td></tr>
<tr><td>2</td><td>22241ರಿಂದ 22256</td><td>0912.05 ರಿಂದ 12.12.05</td><td>5482.50</td><td>215</td><td>16.12.2005</td><td>04 ದಿನ</td></tr>
<tr><td>3</td><td>22269ರಿಂದ 22278</td><td>15.12.05 ರಿಂದ 17.12.05</td><td>4651.50</td><td>216</td><td>20.12.2005</td><td>05 ದಿನ</td></tr>
<tr><td>4</td><td>2380203803</td><td>18.01.06</td><td>180.00</td><td>236</td><td>23.01.2006</td><td>05 ದಿನ</td></tr>
</table>
<br>ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:41 06–07 ದಿನಾಂಕ 29.09.06 ರಂದು ನೀಡಿದ್ದು ಹಣಕಾಸು ವಿಭಾಗದಲ್ಲಿ ರಸೀದಿ ಸಂಖ್ಯೆ:21313: ದಿ:29.09.06 ರಂದು ರೂ 28.00 ಬ್ಯಾಂಕ್ ಬಡ್ಡಿದರ ಶೇ ರಂತೆ ಹಣಕಾಸು ವಿಭಾಗಕ್ಕೆ ಸಂದಾಯ ಮಾಡಿದ್ದಾರೆ. ಪ್ರಸಾರಾಂಗದ ನಿರ್ದೇಶಕುರು, ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಸಿಬ್ಬಂದಿಗೆ ಸ್ವೀಕೃತವಾದ ಮೊತ್ತ ಮಾರನೇ ಕೆಲಸದ ದಿನ ಬ್ಯಾಂಕಿಗೆ ಜಮಾ ಮಾಡಲು ಸೂಕ್ತ ನಿರ್ದೇಶನ ನೀಡಿ, ತಾತ್ಕಾಲಿಕ ಹಣ ದುರುಪಯೋಗವಾಗದಂತೆ ಮುನ್ನೆಚ್ಚರಿಕೆವಹಿಸಲು ಸೂಚಿಸಿದೆ.</td><td>ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ನಗದು ಪುಸ್ತಕ ಮಾರಾಟ ಮಾಡಿದ ಮೊತ್ತ ವಿಳಂಬವಾಗಿ ಬ್ಯಾಂಕಿಗೆ ಜಮಾ ಮಾಡಿದ ಸಿಬ್ಬಂದಿಯಿಂದ ರೂ. 28.00ವಸೂಲು ಮಾಡಿ ಹಣಕಾಸು ವಿಭಾಗದ ರಸೀದಿ ಸಂಖ್ಯೆ 21313/29.09.2006 ಜಮಾ ಮಾಡಲಾಗಿದೆ ಮತ್ತು ಸಂಬಂಧಿತ ಸಿಬ್ಬಂದಿಗೆ ಸ್ವೀಕೃತವಾದ ಮೊತ್ತ ಮಾರನೆ ಕೆಲಸದ ದಿನ ಬ್ಯಾಂಕಿಗೆ ಜಮಾ ಮಾಡಲು ಹಾಗೂ ಪ್ರತಿ ದಿನ ಜಮಾ ಮಾಡುವ ರಿಜಿಸ್ಟರ್ ಅನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲು ಆದೇಶ ನೀಡಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td><td></td><td></td></tr>
<tr><td>26</td><td>ಪ್ರಸಾರಾಂಗ ವಿಭಾಗದಲ್ಲಿ ಸರಸ್ವತಿ ಪುಸ್ತಕ ಮಾರಾಟ ಮಳಿಗೆಯಲ್ಲಿ ಪುಸ್ತಕ ಹಾಗೂ ನಿಯತಕಾಲಿಕೆ ಮಾರಾಟ ಮೊತ್ತವನ್ನು ಹಣಕಾಸು ವಿಭಾಗಕ್ಕೆ ವಿಳಂಬವಾಗಿ ಜಮಾ ಮಾಡಿರುವ ಬಗ್ಗೆ.<br>2005–06ನೇ ಸಾಲಿನ ಪ್ರಸಾರಾಂಗ ನಗದು ಪುಸ್ತಕಗಳ ರಸೀದಿ ಪುಸ್ತಕ, ನಿಯತಕಾಲಿಕೆ ನಗದು ರಸೀದಿ ಪುಸ್ತಕದ</td><td>ವಿಭಾಗದಲ್ಲಿ ಸರಸ್ವತಿ ಪುಸ್ತಕ ಮಾರಾಟ ಮಳಿಗೆಯಲ್ಲಿ ಪುಸ್ತಕ ಹಾಗೂ ನಿಯತಕಾಲಿಕೆ ಮಾರಾಟ ಮೊತ್ತವನ್ನು ಹಣಕಾಸು ವಿಭಾಗಕ್ಕೆ ವಿಳಂಬವಾಗಿ ಜಮಾ ಮಾಡಿರುವ ಸಿಬ್ಬಂದಿಯಿಂದ ರೂ.1697.00</td><td></td><td></td></tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | ಮೊತ್ತ ಹಾಗೂ ಹಣಕಾಸು ವಿಭಾಗಕ್ಕೆ ಸಂದಾಯ ಮಾಡಿದ ಮೊತ್ತ ಪರಿಶೀಲಿಸಿದಾಗ ವಿವಿಧ ದಿನಾಂಕಗಳೆಂದು ಸ್ವೀಕೃತವಾದ ಮೊತ್ತ ತುಂಬಾ ವಿಳಂಬವಾಗಿ ಹಣಕಾಸು ವಿಭಾಗಕ್ಕೆ ಜಮಾ ಮಾಡಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ. ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ–33. 2006–07, 26.09.06ರಂದು ನೀಡಿದ್ದು ವಿಳಂಬವಾಗಿ ಪಾವತಿ ಮಾಡಿದ ಮೊತ್ತಕ್ಕೆ ಬ್ಯಾಂಕಿನ ಶೇ.18ರ ಬಡ್ಡಿ ಮಾಡಿದ್ದಾರೆ. ರೂ.1,697.00 ಹಣಕಾಸು ವಿಭಾಗದ ರಸೀದಿ ಸಂಖ್ಯೆ: 21311 ದಿ.28.09.06ರಂದು ಸಮಾ ಮಾಡಿದ್ದಾರೆ. ಪ್ರಸಾರಾಂಗದ ನಿರ್ದೇಶಕರು ಈ ರೀತಿ<br>ತಾತ್ಕಾಲಿಕ ಹಣ ದುರುಪಯೋಗವಾಗದಂತೆ ಮುನ್ನೆಚ್ಚರಿಕೆ ವಹಿಸಲು ಸೂಚಿಸಿದೆ. | ಗಳನ್ನು ವಸೂಲು ಮಾಡಿ ವಿತ್ತ ವಿಭಾಗದ ರಸೀದಿ ಸಂಖ್ಯೆ 21311/28.08.2006ರಲ್ಲಿ ಜಮಾ ಮಾಡಲಾಗಿದೆ. ಪ್ರತಿ ದಿನ ಜಮಾ ಮಾಡುವ ರಿಜಿಸ್ಟರ್‌ಅನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲು ಆದೇಶ ನೀಡಲಾಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | | |
| 27 | **ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಸಾಲದ ಪುಸ್ತಕದ ಬಾಕಿ ಮೊತ್ತ ವಸೂಲಿ ಮಾಡದಿರುವ ಬಗ್ಗೆ**<br>2005–06ನೇ ಸಾಲಿನ ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಸಾಲದ ರೂಪದಲ್ಲಿ ಪುಸ್ತಕ ನೀಡಿದ್ದು, ಬಾಕಿ ಮೊತ್ತ 31.03.06ಕ್ಕೆ ರೂ. 1,27504.00 ಬಾಕಿ ಇರುತ್ತದೆ.( ವಿವರಗಳನ್ನು ಅನುಬಂಧ–7 ಮತ್ತು 8–ರಲ್ಲಿ ನೀಡಿದೆ.<br>2001–02ರಿಂದ 2004–05 ರ ವರೆಗೆ ರೂ. 82,644.00<br>2005–06ನೇ ಸಾಲಿನದು ರೂ. 44,860.00<br>**ಒಟ್ಟು** **ರೂ.** 1,27,504.00<br>ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಪತ್ರ ಸಂಖ್ಯೆ: 40, 2006–07 ದಿನಾಂಕ 29.09.06 ರಲ್ಲಿ ವಿಚಾರಣೆ ಪತ್ರ ನೀಡಿದ್ದು. ಇದಕ್ಕೆ ಉತ್ತರ ನೀಡಿರುವುದಿಲ್ಲ. ಪ್ರಸಾರಾಂಗದ ನಿರ್ದೇಶಕರು, ಬೆಂಗಳೂರು ಪುಸ್ತಕ ಮಾರಾಟ ಮಳಿಗೆಯ ಸಿಬ್ಬಂದಿಗೆ ಶೀಘ್ರವಾಗಿ ಬಾಕಿ ರೂ.1,27,504.00 ಸಾಲದ ಮೊತ್ತ ವಸೂಲಿ ಮಾಡಲು ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ. ಹಾಗೂ ರಸೀದಿ ಷರತ್ತಿನ ಪ್ರಕಾರ ಒಂದು ತಿಂಗಳೊಳಗಾಗಿ ಹಣವನ್ನು ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ನಿಟ್ಟಿನ ಆದೇಶ ನೀಡಲು ಸೂಚಿಸಿದೆ. | 2005–06ನೇ ಮಾರ್ಚ್ ಅಂತ್ಯದವರೆಗಿನ ಪ್ರಸಾರಾಂಗದ ಬೆಂಗಳೂರು ಮಾರಾಟ ಮಳಿಗೆಯಲ್ಲಿ ಸಾಲರೂಪದಲ್ಲಿ ಮಾರಾಟ ಮಾಡಿದ ಬಾಕಿ ಮೊತ್ತ ರೂ.1,27,504 ಇದ್ದು ದಿನಾಂಕ 01.04.2006 ರಿಂದ 30.04.2007 ರವರೆಗೆ ರೂ. 58,618/– ಗಳನ್ನು ವಸೂಲಿ ಮಾಡಲಾಗಿದೆ. ಬಾಕಿ ಮೊತ್ತದ ವಸೂಲಾತಿಗೆ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ | | |
| 28 | **ಪ್ರಸಾರಾಂಗದಿಂದ ಖರೀದಿಸಿದ ಪುಸ್ತಕಗಳ ಬಾಕಿ ಮೊತ್ತ ವಸೂಲಿ ಮಾಡದಿರುವ ಬಗ್ಗೆ:**<br>2005–06ನೇ ಸಾಲಿನಲ್ಲಿ 31.03.06ರ ಅಂತ್ಯಕ್ಕೆ ರೂ. 73,064.00 ಸಾಲದ ರೂಪದಲ್ಲಿ ನೀಡಿದ ಪುಸ್ತಕಗಳ ಬಾಬ್ತು ಹಾಗೂ ನಿಯತಕಾಲಿಕೆಗಳ ಬಾಕಿ ರೂ. 34,840.00 ಇರುತ್ತದೆ.<br>ಈ ಬಗ್ಗೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ: 34,2006–07 ದಿನಾಂಕ 26.09.2006ರಲ್ಲಿ ನೀಡಿದ್ದು ಉತ್ತರವಾಗಿ ಬಾಕಿ ಇರುವ ಸಾಲದ ಮೊತ್ತ ವಸೂಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆಯೆಂದು ತಿಳಿಸಿದ್ದಾರೆ. ಸಾಲದ | 1994 ರಿಂದ 2005–06ನೇ ಮಾರ್ಚ್ ಅಂತ್ಯದವರೆಗಿನ ಪ್ರಸಾರಾಂಗದ ಸಾಲರೂಪದಲ್ಲಿ ಮಾರಾಟ ಮಾಡಿದ ಪ್ರಕಟಣೆಗಳು ಮತ್ತು ನಿಯತಕಾಲಿಕೆಗಳ ಬಾಕಿ ಮೊತ್ತ ರೂ.5,07,904/–(4,73,064+34,840) ಇದ್ದು ದಿನಾಂಕ 01.04.2006 ರಿಂದ 30.04.2007ರ ವರೆಗೆ ರೂ. 1,20,916/– ಗಳನ್ನು ವಸೂಲು ಮಾಡಲಾಗಿದೆ. ಬಾಕಿ ಮೊತ್ತದ ವಸೂಲಾತಿಗೆ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | | |



PDF created with pdfFactory trial version www.pdffactory.com

ರಸೀದಿ ಪುಸ್ತಕದಲ್ಲಿ ಒಂದು ತಿಂಗಳೊಳಗಾಗಿ ಹಣ ಕಟ್ಟಬೇಕೆಂಬ ಷರತ್ತು ಇದ್ದು ಷರತ್ತು ಉಲ್ಲಂಘನೆಯಾಗಿದೆ.

ಇದು ಪ್ರಸಾರಾಂಗದ ನಿರ್ದೇಶಕರ ಪೂರ್ಣ ಜವಾಬ್ದಾರಿಯಾಗಿದ್ದು, ಈ ವಿಷಯದ ಬಗ್ಗೆ ಪ್ರಥಮ ಆದ್ಯತೆ ನೀಡಿ ಬಾಕಿ ಇರುವ ಸಾಲದ ಮೊತ್ತವನ್ನು ಶೀಘ್ರವಾಗಿ ವಸೂಲಿ ಸೂಚಿಸಿದೆ.

29 **ಅರ್ಹತೆ ಇಲ್ಲದೇ ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ಬಡ್ತಿ ನೀಡಿರುವ ಬಗ್ಗೆ.**

2004–05ನೇ ಸಾಲಿನ ತನಿಖಾ ಕಂಡಿಕೆ.ಸಂ:45ರಲ್ಲಿ ತಿಳಿಸಿದಂತೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಈ ಕೆಳಗಿನ ಸಿಬ್ಬಂದಿಯವರಿಗೆ ವಿಶ್ವವಿದ್ಯಾಲಯದ ಆದೇಶ ಸಂ:ಕವಿಹಂ:ಕುಸ: ಮುಂಬಡ್ತಿ 0304/100 ದಿನಾಂಕ 22.12.2003ರ

1. ಶ್ರೀ. ಜಿ.ಶಿವಕುಮಾರ
2. ಶ್ರೀ ಬಿ. ಈರಪ್ಪ
3. ಶ್ರೀ ಎಂ.ಎಂ. ಶಿವಪ್ರಕಾಶ್
4. ಶ್ರೀ ರಿಚರ್ಡ್ ಡಿಸೋಜಾ
5. ಶ್ರೀ ಜೆ.ಬಸವನಗೌಡ
6. ಶ್ರೀ ಶಶಿಕುಮಾರ
7. ಶ್ರೀ ಗ್ಯಾನಪ್ಪ ಬಡಿಗೇರ

ಇವರಿಗೆ ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕರಾಗಿ ನೀಡಿದ ಹಿರಿಯ ಹುದ್ದೆಯ ಬಡ್ತಿಯಲ್ಲಿ ಹಿಂದಕ್ಕೆ ಪಡೆದು ಹಾಗೂ ಹೆಚ್ಚಿಗೆ ವೇತನ ಮತ್ತು ಭತ್ಯೆ ಪಾವತಿಸಿದ ಮೊಬಲಗನ್ನು ವಸೂಲಿ ಮಾಡಿಸಿ ಬಗ್ಗೆ ಪ್ರಸಕ್ತ ಸಾಲಿನಲ್ಲಿ ಯಾವ ಮಾಹಿತಿಯನ್ನು ತನಿಖೆಗೆ ಹಾಜರುಪಡಿಸಿಲ್ಲ. ಕಾರಣ 2005–06ನೇ ಸಾಲಿನಲ್ಲಿ ಬಡ್ತಿಗೆ ಅರ್ಹತೆ ಇಲ್ಲದೆ ಕ್ರ.ಸಂ.1,2,7ರಲ್ಲಿನ ಸಿಬ್ಬಂದಿಯವರಿಗೆ ಹೆಚ್ಚುವರಿ ಸಂದಾಯ ಮಾಡಿದ್ದು ಮೊಬಲಗನ್ನು ರೂ. 7,848.00ಗಳನ್ನು ಸಂಬಂಧಪಟ್ಟ ಸಿಬ್ಬಂದಿಯವರಿಂದ ವಸೂಲಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ಸೂಚಿಸಿದೆ.

| ಕ್ರ. ಸಂ | ಸಿಬ್ಬಂದಿಯವರ ಹೆಸರು | ಬಡ್ತಿ ವೇತನ ನಿಗದಿ ಪಡಿಸಿದ ದಿನಾಂಕ | 2005.06ನೇ ಸಾಲನಲ್ಲಿ ವಸೂಲಿ ಮಾಡಬೇಕಾದ ಮೊತ್ತ |
|---|---|---|---|
| 1 | ಶ್ರೀ ಜಿ.ಶಿವಕುಮಾರ | 02.01.2004 | 2,616.00 |
| 2 | ಗ್ಯಾನಪ್ಪ ಬಡಿಗೇರ | 02.01.2004 | 2,616.00 |
| 3 | ಶ್ರೀ ಬಿ.ಈರಪ್ಪ | 02.01.2004 | 2,616.00 |
| | | **ಒಟ್ಟು** | **7848.00** |



PDF created with pdfFactory trial version www.pdffactory.com

| | | | | |
|---|---|---|---|---|
| 30 | **ಶ್ರೀ ಎಲ್. ನಾರಾಯಣ, ಅನುಚರ ಇವರಿಗೆ ವಿದ್ಯಾರ್ಹತೆ ಇಲ್ಲದ ಅನುಚರ ಹುದ್ದೆಯಿಂದ ಕಿರಿಯ ಸಹಾಯಕ ಹುದ್ದೆಗೆ ಬಡ್ತಿ ನೀಡಿರುವ ಬಗ್ಗೆ**<br>2004–05ನೇ ಸಾಲಿನಲ್ಲಿ ಲೆಕ್ಕ ತನಿಖೆಯ ಕಂಡಿಕೆ. ಸಂ. 46ರಲ್ಲಿ ಶ್ರೀ.ಎಲ್. ನಾರಾಯಣ, ಅನುಚರ ಇವರಿಗೆ ವಿಶ್ವವಿದ್ಯಾಲಯ ಆದೇಶ ಸಂ: ಕವಿಹ: ಕುಸ: ಮುಂಬಡ್ತಿ, ದಿನಾಂಕ:05.03.04ರಂದು ದಿನಾಂಕ: 06.03.04 ರಿಂದ ಜಾರಿಗೆ ಬರುವಂತೆ ಅನುಚರ ಹುದ್ದೆಯಿಂದ(ವೇತನ ಶ್ರೇಣಿ 2600–4350) ಕಿರಿಯ ಸಹಾಯಕ ಹುದ್ದೆಗೆ (ವೇತನ ಶ್ರೇಣಿ3000–5430)ಬಡ್ತಿಯನ್ನು ನೀಡಿ ಕಿರಿಯ ಸಹಾಯಕ ಹುದ್ದೆಗೆ ಬೇಕಾದ ವಿದ್ರ್ಯಾಹತೆಯನ್ನು ಸೇವಾ ಅವಧಿಯೊಳಗೆ ಪಡೆಯಲು ಷರತ್ತನ್ನು ವಿಧಿಸಿ ಮುಂಬಡ್ತಿ ನೀಡಿರುತ್ತಾರೆ. ಆದರೆ ಕಿರಿಯ ಸಹಾಯಕ ಹುದ್ದೆಗೆ ಬಡ್ತಿ ನೀಡಬೇಕೆಂದರೆ ಸದ್ರಿ ಸಿಬ್ಬಂದಿಯವರು ಕಡ್ಡಾಯವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಪಾಸು ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾಲಯದ ಪರಿನಿಯಮದ ಸೇವಾ ನಿಯಮಗಳ ಅನ್ವಯ ಬಡ್ತಿಗೆ ಎಸ್.ಎಸ್.ಎಲ್.ಸಿ. ಮತ್ತು ಇಲಾಖಾ ಪರೀಕ್ಷೆಯನ್ನು ಪಾಸು ಮಾಡುವುದು ಅವಶ್ಯಕವಾಗಿರುತ್ತದೆ. ಸದ್ರಿ ಸಿಬ್ಬಂದಿಗೆ ಬಡ್ತಿ ನೀಡಿದ್ದು ನಿಯಮ ಉಲ್ಲಂಘಿಸಿದಂತಾಗಿದೆ. ಕಾರಣ ಕಿರಿಯ ಸಹಾಯಕ ಹುದ್ದೆ ಬಡ್ತಿ ನೀಡಿದ್ದನ್ನು ಹಿಂದಕ್ಕೆ ಪಡೆದು ಅನುಚರ ಹುದ್ದೆಯ ವೇತನ ಶ್ರೇಣಿಯಲ್ಲಿ ವೇತನ ಪುನರ್ ನಿಗದಿಪಡಿಸಲು ಸೂಚನೆ ನೀಡಲಾಗಿತ್ತು | | | |
| 31 | **ಶ್ರೀ ಕೆ. ಪ್ರೇಮಕುಮಾರ, ಸಹಾಯಕ ಕುಲಸಚಿವರು ಇವರ ನಿಗದಿಯಲ್ಲಿ ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳದಿರುವ ಬಗ್ಗೆ**<br>2004–05ನೇ ಸಾಲಿನ ಲೆಕ್ಕ ತನಿಖಾ ವರದಿಯ ಕಂಡಿಕೆ ಸಂ.48ರಲ್ಲಿ ಶ್ರೀ ಕೆ. ಪ್ರೇಮಕುಮಾರ, ಸಹಾಯಕ ಕುಲಸಚಿವರನ್ನು ಸಹಾಯಕ ನಿರ್ದೇಶಕರ ಹುದ್ದೆಯ ಪದನಾಮ ಬದಲಾಯಿಸಲಾಗಿದೆ. ಈ ಬದಲಾದ ಪದನಾಮ ಸಹಾಯಕ ಕುಲಸಚಿವರ ವೇತನ ಶ್ರೇಣಿ ರೂ.2,375–4,450–(1994)ರ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿರುವದನ್ನು ಸರ್ಕಾರವು ಆಕ್ಷೇಪಿಸಿ ಪುನಃ ಸಹಾಯಕ ನಿರ್ದೇಶಕರ ಹುದ್ದೆಯ ವೇತನವನ್ನು ಪುನರ್ ನಿಗದಿಪಡಿಸಿ ಹೆಚ್ಚುವರಿ ಪಾವತಿಸಿದ ವೇತನದ ವ್ಯತ್ಯಾಸದ ವಸೂಲಿ ಮಾಡಲು ಸೂಚಿಸಲಾಗಿತ್ತು. ಆದರೆ ಸದ್ರಿಯವರು ವಸೂಲಾತಿಗೆ ಕೋರ್ಟಿನಿಂದ ತಡೆಯಾಜ್ಞೆ ತಂದಿರುವುದರಿಂದ ವಸೂಲಾತಿ ಮಾಡಬಾರದೆಂದು ತಿಳಿಸಿದ್ದಾರೆ. ಆದರೆ 2005–06ನೇ ಸಾಲಿನಲ್ಲಿ ಸದ್ರಿ ವಿಷಯಕ್ಕೆ ಕ್ರಮಕೈಕೊಂಡಿರುವ ಬಗ್ಗೆ ವಿವರವಾದ ಮಾಹಿತಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲ, ಕಾರಣ ಪ್ರಸಕ್ತ ಸಾಲಿನಲ್ಲಿ ಸಂದಾಯ ಮಾಡಿದ್ದು ಒಟ್ಟು ಮೊತ್ತ ರೂ. 1,87,720.00ಗಳನು ಅಂತಿಮ ತೀರ್ಪು ಬಂದ ನಂತರ ಅಂದರಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ಶ್ರೀ ಪ್ರೇಮಕುಮಾರ ಇವರ ಮೊಕದ್ದಮೆಯ ಅಂತಿಮ ತೀರ್ಪಿನನ್ವಯ ಕುಲಸಚಿವರ ಆದೇಶ ಸಂಖ್ಯೆ. ಕವಿಹಂ: ಕುಸ: ನೇಮಕಾತಿ 2004–05/7141 ದಿನಾಂಕ ಮಾರ್ಚ್ 24, 2005 ರಂತೆ ಆದೇಶ ನೀಡಲಾಗಿದೆ. ಕರ್ನಾಟಕ ರಾಜ್ಯದ ಉಚ್ಛನ್ಯಾಯಾಲಯದ ತೀರ್ಪಿನಂತೆ ಕ್ರಮವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | | |
| 32 | **ಡಾ. ಕೆ.ಹೆಚ್. ಕಟ್ಟಿಯವರನ್ನು ಕನ್ನಡ ವಿಶ್ವವಿದ್ಯಾಲಯದ ಯೋಜನಾಧಿಕಾರಿಯಾಗಿ ವಿಲೀನಗೊಳಿಸಿರುವ ಬಗ್ಗೆ:**<br>2004–05ನೇ ಸಾಲಿನ ಕಂಡಿಕೆ ಸಂ.49ರಲ್ಲಿ ಡಾ.ಕೆ.ಹೆಚ್.ಕಟ್ಟಿಯವರನ್ನು ಯೋಜನಾಧಿಕಾರಿ ಹುದ್ದೆಯಲ್ಲಿ ವಿಲೀನಗೊಳಿಸಿ ಕನ್ನಡ ವಿಶ್ವವಿದ್ಯಾಲಯದ ಸೇವೆಯಲ್ಲಿ ಮುಂದುವರೆಸಲಾಗಿದೆ. ಅವರ ಯೋಜನಾ ಅವಧಿ | ಡಾ.ಕೆ.ಹೆಚ್. ಕಟ್ಟಿ ಇವರ ಮೊಕದ್ದಮೆಯ ಅಂತಿಮ ತೀರ್ಪಿನನ್ವಯ ಕುಲಸಚಿವರ ಆದೇಶ ಸಂಖ್ಯೆ. ಕವಿಹಂ: ಕುಸ: ನೇಮಕಾತಿ 2005–06 /7627 ದಿನಾಂಕ ಮೇ 17, 2005 ರಂತೆ ಆದೇಶ ನೀಡಲಾಗಿದೆ. ಕರ್ನಾಟಕ ರಾಜ್ಯದ ಉಚ್ಛನ್ಯಾಯಾಲಯದ | | |



PDF created with pdfFactory trial version www.pdffactory.com

| | | | | |
|---|---|---|---|---|
| | ಅಂತ್ಯಗೊಂಡ ಕೂಡಲೇ ಅವರನ್ನು ಹಿಂದಕ್ಕೆ ಕಳುಹಿಸಿಕೊಡುವಂತೆ ಕುಲಾಧಿಪತಿಗಳು ಆದೇಶಿಸಿರುತ್ತಾರೆ.<br>ಡಾ. ಕೆ. ಹೆಚ್. ಕಟ್ಟಿಯವರನ್ನು ಕನ್ನಡ ವಿಶ್ವವಿದ್ಯಾಲಯದಿಂದ ವಾಪಸು ಕಳುಹಿಸಿ, ಸರ್ಕಾರಕ್ಕೆ ಮಾಹಿತಿಯನ್ನು ಸಲ್ಲಿಸುವಂತೆ ಶಿಕ್ಷಣ ಇಲಾಖೆ, ಉಪ ಕಾರ್ಯದರ್ಶಿಗಳೂ ಇವರು ಆದೇಶ ಮಾಡುತ್ತಾರೆ. ಇದಕ್ಕೆ ಪ್ರತಿಯಾಗಿ ಸದ್ರಿ ಸಿಬ್ಬಂದಿ ನ್ಯಾಯಾಲಯಕ್ಕೆ ರಜಾ ಅರ್ಜಿಯನ್ನು ಸಲ್ಲಿಸಿ ತಡೆಯಾಜ್ಞೆ ತಂದಿರುತ್ತಾರೆ. ನ್ಯಾಯಾಲಯದ ಈ ತಡೆಯಾಜ್ಞೆಯನ್ನು ತೆರವುಗೊಳಿಸಿ ಕ್ರಮಕೈಗೊಳ್ಳುವಂತೆ ತನಿಖಾ ವರದಿಯಲ್ಲಿ ಸೂಚಿಸಲಾಗಿತ್ತು.<br>2005–06ನೇ ಸಾಲಿನಲ್ಲಿ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಿದ ಬಗ್ಗೆ ಯಾವ ಮಾಹಿತಿಯನ್ನು ತನಿಖೆಗೆ ಹಾಜರುಪಡಿಸಿರುವುದಿಲ್ಲ ಕಾರಣ ಪ್ರಸಕ್ತ ಸಾಲಿನಲ್ಲಿ ಸದ್ರಿ ಸಿಬ್ಬಂದಿಯವರಿಗೆ ಪಾವತಿ ಮಾಡಲಾದ ಒಟ್ಟು ರೂ.2,00,616.00 ಗಳನ್ನು ನ್ಯಾಯಾಲಯದ ತೀರ್ಪು ಬಂದ ನಂತರ ಅದರಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ತೀರ್ಪಿನಂತೆ ಕ್ರಮವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. | | |
| 33 | **ವಿಶ್ವವಿದ್ಯಾಲಯದ ಸಿಬ್ಬಂದಿಯವರಿಗೆ ಅರ್ಹತೆ ಇಲ್ಲದಿದ್ದರೂ ಯುಜಿಸಿ ವೇತನ ಶ್ರೇಣಿ ನೀಡಿರುವ ಬಗ್ಗೆ**<br>ವಿಶ್ವವಿದ್ಯಾಲಯದ ಬೋಧಕ ಹಾಗೂ ಗ್ರಂಥಪಾಲಕರುಗಳಿಗೆ ಅರ್ಹತೆ ಇಲ್ಲದಿಸದ್ದರೂ ಯುಜಿಸಿ ವೇತನ ಶ್ರೇಣಿಯನ್ನು ನೀಡಿ ವೇತನ ನಿಗದಿಪಡಿಸಲಾಗಿದೆಯೆಂದು 2002–03ನೇ ಸಾಲಿನಲ್ಲಿ ಲೆಕ್ಕ ತನಿಖಾ ವರದಿ ಕಂಡಿಕೆ–36, 2003–04ನೇ ಸಾಲಿನ ಕಂಡಿಕೆ–48 ಹಾಗೂ 2004–05ನೇ ಸಾಲಿನ ತನಿಖಾ ವರದಿ ಕಂಡಿಕೆ ಸಂ.50ರಲ್ಲಿ ಆಕ್ಷೇಪಿಸಲಾಗಿದೆ. ಸರ್ಕಾರ ಶಿಕ್ಷಣ ಇಲಾಖೆಯ ಪತ್ರ ಸಂ.ಇಡಿ/10 ಕೆವಿವಿ2002 ದಿನಾಂಕ: 06.12.2003ರ ಪ್ರಕಾರ ಅಧ್ಯಾಪಕರು/ ಪ್ರವಾಚಕರು ಅರ್ಹತೆ ಹೊಂದಿದ್ದಾರೆ ಎಂದು ತನಿಖೆಗೆ 2003ರಲ್ಲಿ ಉತ್ತರ ನೀಡಲಾಗಿದೆ.ಆದರೆ ಶಿಕ್ಷಣ ಇಲಾಖೆ, ಬೆಂಗಳೂರು ಪತ್ರದಲ್ಲಿ ಎಂಟು ಜನ ಸಿಬ್ಬಂದಿಯವರು ಪಿಎಚ್.ಡಿ ಮೌಲ್ಯ ಮಾಪನಕ್ಕಾಗಿ ಪ್ರಬಂಧ ಸಲ್ಲಿಸಿದ್ದು ಹಾಗೂ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿರುವುದರಿಂದ ಪ್ರಕರಣವನ್ನು ಸರ್ಕಾರದ ಹಂತದಲ್ಲಿ ಮುಕ್ತಾಯಗೊಳಿಸಿದೆಯೆಂದು ತಿಳಿಸಲಾಗಿದೆ. ಆದರೆ ಈ ಬಗ್ಗೆ ಸ್ಪಷ್ಟ ಆದೇಶ ನೀಡಲಾದ ವಿವರಗಳನ್ನು ನೀಡಿರುವುದಿಲ್ಲ 27, ಸಿಬ್ಬಂದಿಗಳಿಗೆ ಯುಜಿಸಿ ವೇತನ ಪಾವತಿಸಿದ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ವಿವರವನ್ನು ಪಡೆದು ತನಿಖೆಗೆ ಹಾಜರು ಪಡಿಸಲು ಕೋರಲಾಗಿತ್ತು. ಆದರೆ 2005–06ನೇ ಸಾಲಿನಲ್ಲಿ ತನಿಖೆಗೆ ಯಾವ ಮಾಹಿತಿಯನ್ನು ನೀಡಿರುವುದಿಲ್ಲ. ಕಾರಣ ಪ್ರಸಕ್ತ ಸಾಲಿನಲ್ಲಿ ವೇತನ ಪಾವತಿಸಿದ ಒಟ್ಟು ಮೊಬಲಗು ರೂ. 79,55,964.00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಅನುಬಂಧ ಸಂ.9ರಲ್ಲಿ ನೀಡಲಾಗಿದೆ. | ದಿನಾಂಕ 01.01.1996ರ ಮೊದಲು ಮೆರಿಟ್ ಪ್ರೊಮೋಷನ್ ಸ್ಕೀಮ್ ಅನ್ವಯ ಅದರಲ್ಲಿ ಸೂಚಿಸಿದ ಅರ್ಹತೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ನಿಯಮಾನುಸಾರ ನೇಮಕಾತಿ ಮಾಡಲಾಗಿದೆ. 36(1) ಶ್ರೀಮತಿ ಎಚ್. ನಾಗವೇಣಿ ಇವರು ದಿನಾಂಕ 21.08.1993ರಲ್ಲಿ ನೇಮಕಾತಿ ಆಗಿದ್ದಾರೆ. ಸದರಿಯವರ ನೇಮಕಾತಿ ಸಂದರ್ಭದಲ್ಲಿ ಸಹಾಯಕ ಗ್ರಂಥಪಾಲಕರಿಗೆ ನೆಟ್ ಅಥವಾ ಎಂಫಿಲ್ ಅಥವಾ ಪಿಎಚ್.ಡಿ ಆಗಬೇಕೆಂಬ ಷರತ್ತುಗಳನ್ನು ಯುಜಿಸಿ ನಿಗದಿಪಡಿಸಿರಲಿಲ್ಲ. ಅಧ್ಯಾಪಕರ ನೇಮಕಕ್ಕೆ ಮಾತ್ರ ಈ ನಿಯಮಗಳನ್ನು ನಿಗದಿಪಡಿಸಲಾಗಿತ್ತು. ಆದರೆ 1993ರ ಡಿಸೆಂಬರ್ ನಿಂದ ಸದರಿ ಷರತ್ತುಗಳನ್ನು ಸಹಾಯಕ ಗ್ರಂಥಪಾಲಕರಿಗೂ ವಿಸ್ತರಿಸಲಾಯಿತು. ಅಲ್ಲದೇ ಒಂದು ವೇಳೆ ಅಂಥಹ ಷರತ್ತುಗಳನ್ನು ವಿಧಿಸಿದ್ದರೂ 2002ರವರೆಗೆ ಯುಜಿಸಿಯು ಎಂಫಿಲ್/ಪಿಎಚ್.ಡಿ ಮಾಡಿಕೊಂಡವರಿಗೆ ಇಂಥಹ ಷರತ್ತುಗಳಿಗೆ ವಿನಾಯ್ತಿ ನೀಡಲಾಗಿದೆ. ಸದರಿಯವರು ಕೂಡ ಈ ಅವಧಿಯಲ್ಲಿ ಪಿಎಚ್.ಡಿ ಪದವಿಯನ್ನು ಪೂರೈಸಿದ್ದಾರೆ.<br>ವಿಶ್ವವಿದ್ಯಾಲಯದ ಪರಿನಿಯಮದನ್ವಯ ಸಹಾಯಕ ಗ್ರಂಥಪಾಲಕರ ನೇಮಕಾತಿಗೆ ವಿದ್ಯಾರ್ಹತೆ “ಅಂಗೀಕೃತ | | |



PDF created with pdfFactory trial version www.pdffactory.com

| | | | | |
|---|---|---|---|---|
| | | ವಿಶ್ವವಿದ್ಯಾಲಯದಿಂದ ಗ್ರಂಥಾಲಯದ ವಿಷಯದಲ್ಲಿ ಸ್ನಾತಕೋತ್ತರ ಪದವಿ" ಎಂದು ಇದೆ. ಅದೇ ರೀತಿ ಸದರಿಯವರು ಗ್ರಂಥಾಲಯದ ವಿಷಯದಲ್ಲಿ ಸ್ನಾತಕೊತ್ತರ ಪದವಿ ಮಾಡಿರುವುದರಿಂದ ನೆಟ್/ಎಂಫಿಲ್/ಪಿಎಚ್.ಡಿ ಅವಶ್ಯಕತೆ ಇರುವುದಿಲ್ಲ.<br><br>(2) ಹನುಮಣ್ಣ ನಾಯಕ ದೊರೆ ಪ್ರಾಧ್ಯಾಪಕರಾಗಿ ನೇರ ನೇಮಕಾತಿ ಆಗಿದ್ದಾರೆ. ವಿಶ್ವವಿದ್ಯಾಲಯದ ಪರಿನಿಯಮದ ವಿದ್ಯಾರ್ಹತೆ ಮತ್ತು ಅನುಭವದ ಕಾಲಂನಲ್ಲಿ 10ವರ್ಷ ಬೋಧನಾ ಅನುಭವ ಅಥವಾ ಯಾವುದೇ ಜ್ಞಾನ ಶಾಖೆಗೆ ಮಹತ್ವದ ಕಾಣಿಕೆ ಸಲ್ಲಿಸಿರುವ ಪ್ರಖ್ಯಾತ ವಿದ್ವಾಂಸನಾಗಿರಬೇಕು ಎಂದಿದೆ. ಸದರಿಯವರಿಗೆ 14 ವರ್ಷ ಬೋಧನಾನುಭವವಿದೆ ಹಾಗೂ ಸಂಗೀತ ಶಾಖೆಗೆ ಮಹತ್ವದ ಕಾಣಿಕೆ ಸಲ್ಲಿಸಿರುವ ಪ್ರಖ್ಯಾತ ವಿದ್ವಾಂಸರಾಗಿದ್ದಾರೆ. ಪ್ರಸ್ತುತ ಕರ್ನಾಟಕ ಸರ್ಕಾರವು ಇವರನ್ನು ಸಂಗೀತ ವಿಶ್ವವಿದ್ಯಾಲಯಕ್ಕೆ ವಿಶೇಷಾಧಿಕಾರಿಯಾಗಿ ನೇಮಕ ಮಾಡಿರುವುದೇ ಇದಕ್ಕೆ ಉದಾಹರಣೆ.<br><br>(3) ಪ್ರೊ.ಲಕ್ಷ್ಮಣ ತೆಲಗಾವಿ ಇವರು ದಿನಾಂಕ 22.09.1994 ರಂದು ನೇರ ನೇಮಕಾತಿ ಆಗಿದ್ದಾರೆ. ಇವರಿಗೆ 3ವರ್ಷ ಸಂಶೋಧಾನಾ ಅನುಭವ ಹಾಗೂ 17 ವರ್ಷ ಬೋಧನಾನುಭವ ಇದೆ. ಮಹತ್ವದ ಕಾಣಿಕೆ ಸಲ್ಲಿಸಿರುವ ಪ್ರಖ್ಯಾತ ವಿದ್ವಾಂಸರಾಗಿದ್ದಾರೆ.<br>(4) ರಿಂದ 27<br>ಆಡಿಟ್‌ನಲ್ಲಿ ಆಕ್ಷೇಪಣೆ ಮಾಡಿರುವುದಕ್ಕೆ ಉತ್ತರ, ಎಲ್ಲ ಸಿಬ್ಬಂದಿಗಳಿಗೂ ಬೋಧನಾ ಅನುಭವ/ ಸಂಶೋಧನಾ ಅನುಭವವಿದೆ. ಕೆಲವರು ನೆಟ್, ಕೆಲವರು ಯುಜಿಸಿ, ಕೆಲವರು ಸೆಟ್ ಪಾಸಾಗಿದ್ದಾರೆ. ಇನ್ನು ಕೆಲವರು ನಿಗದಿತ ಅವಧಿಯೊಳಗೆ ಪಿಎಚ್.ಡಿ./ಎಂಫಿಲ್ ಪಾಸಾಗಿದ್ದಾರೆ. ನೆಟ್/ಸೆಟ್/ಯುಜಿಸಿ/ ಪಾಸಾಗದ 8 ಜನ ಸಿಬ್ಬಂದಿಯವರಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ 10 ಕೆವಿವಿ 2002, ಬೆಂಗಳೂರು ದಿನಾಂಕ 06.12.2003 (ಪ್ರತಿ ಲಗತ್ತಿಸಿದೆ) ಪ್ರಕಾರ ನಿಯಮಾನುಸಾರ ತಮ್ಮ ಪಿಎಚ್‌ಡಿ. ಪ್ರಬಂಧವನ್ನು ಮೌಲ್ಯಮಾಪನಕ್ಕಾಗಿ ಸಲ್ಲಿಸಿದ್ದು ಹಾಗೂ | | |



PDF created with pdfFactory trial version www.pdffactory.com

<table>
<tr>
<td></td>
<td></td>
<td>ಪಿಎಚ್.ಡಿ. ಪದವಿಯನ್ನು ಪಡೆದುಕೊಂಡಿರುವುದರಿಂದ ಈ ಪ್ರಕರಣವನ್ನು ಸರ್ಕಾರದ ಹಂತದಲ್ಲಿ ಮುಕ್ತಗೊಳಿಸಿದೆ ಎಂದು ಆದೇಶವಿರುತ್ತದೆ. ಈ ಹಿನ್ನೆಲೆಯಲ್ಲಿ ಇವರಿಗೆ ನೆಟ್/ಸೆಟ್/ಯುಜಿಸಿ ಅವಶ್ಯಕತೆ ಇರುವುದಿಲ್ಲ. ವಿಶ್ವವಿದ್ಯಾಲಯದ ಪರಿನಿಯಮ ಅನುಬಂದ 1 ವಿದ್ಯಾರ್ಹತೆ ಮತ್ತು ಅನುಭವ ಕಾಲಂನಲ್ಲಿ ಕ್ರ.ಸಂ 3 ಉಪನ್ಯಾಸಕರು ಉಪಕಂಡಿಕೆ 4ರ ಪ್ರಕಾರ ಎಲ್ಲ ಸಿಬ್ಬಂದಿಗಳು ಆಯ್ಕೆಯಾದ 8 ವರ್ಷದೊಳಗೆ ಪಿ.ಎಚ್.ಡಿ ಪದವಿ ಮುಗಿಸಿಕೊಂಡಿದ್ದಾರೆ. ಪಿಎಚ್.ಡಿ ಪದವಿ ಪಡೆದುಕೊಂಡಿರುವುದರಿಂದ ಈ ಪ್ಯಾರ ಕೈ ಬಿಡಲು ಕೋರಲಾಗಿದೆ ಈ ಹಿನ್ನೆಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td>
<td></td>
<td></td>
</tr>
<tr>
<td>34</td>
<td>ಸರ್ಕಾರದ ಆದೇಶಕ್ಕೆ ವ್ಯತಿರಿಕ್ತವಾಗಿ ಸಹಾಯಕ ನಿರ್ದೇಶಕರ ವೇತನ ಶ್ರೇಣಿ ಹೆಚ್ಚುವರಿ ವೇತನ ನಿಗದಿಗೊಳಿಸಿರುವ ಬಗ್ಗೆ.<br>2005–06ನೇ ಸಾಲಿನ ತನಿಖಾ ವಿಚಾರಣಾ ಸಂ. 36/2005–06, ದಿನಾಂಕ26.06.2006ರಂದು 2004–05ನೇ ಸಾಲಿನ ಕಂಡಿಕೆ ಸಂ. 51ರಲ್ಲಿ ಶ್ರೀ ಜೈನುಲ್ಲಾ ಬಳ್ಳಾರಿ, ಸಹಾಯಕ ನಿರ್ದೇಶಕ ಇವರು ಪ್ರಕರಣದಲ್ಲಿ ನೀಡಿದ ನ್ಯಾಯಾಲಯದ ತೀರ್ಪು ವೈಯಕ್ತಿಕವಾದದ್ದು ಇದೇ ನ್ಯಾಯಾಲಯದ ತೀರ್ಪನ್ನು ಆಧಾರವಾಗಿಟ್ಟುಕೊಂಡು ಇನ್ನು 4 ಜನ ಸಹಾಯಕ ನಿರ್ದೇಶಕರಿಗೆ ವೇತನ ಶ್ರೇಣಿ 2375–4450ರಲ್ಲಿ ವೇತನ ನಿಗದಿಪಡಿಸಿ ವಿಶ್ವವಿದ್ಯಾಲಯದ ಕ್ರಮಕೈಗೊಂಡಿರುವುದನ್ನು ಆಕ್ಷೇಪಣೆಗೆ ಮಾಡಲಾಗಿತ್ತು. ಆದರೆ ಈ ಪ್ರಕರಣದಲ್ಲಿ ಸರ್ಕಾರದ ಅನುಮೋದನೆ ಪಡೆದ ಬಗ್ಗೆ ವಿವರವಾದ ಮಾಹಿತಿಯನ್ನು ಲೆಕ್ಕ ತನಿಖೆಗೆ ಪರಿಶೀಲನೆಗಾಗಿ ನೀಡಲು ಕೋರಲಾಗಿದೆ. ಆದರೆ ಪ್ರಸಕ್ತ ಸಾಲಿನಲ್ಲಿ ಸದ್ರಿ ವಿಷಯದ ಬಗ್ಗೆ ತನಿಖೆಗೆ ಯಾವ ದಾಖಲಾತಿಯನ್ನು ಹಾಜರುಪಡಿಸಿಲ್ಲ ಕಾರಣ ಸರ್ಕಾರದ ಅನುಮತಿ ಪಡೆಯುವವರೆಗೂ ಸಂದಾಯ ಮಾಡಿದ್ದು ವೇತನ ಮೊತ್ತ ರೂ. 7,53,432.00 ವನ್ನು ಆಕ್ಷೇಪಣೆಯಲ್ಲಿಡಲಾಗಿದೆ.
<table>
<tr><th>ಕ್ರ. ಸಂ.</th><th>ಸಿಬ್ಬಂದಿಯವರ ಹೆಸರು</th><th>ಹುದ್ದೆಯ ಹೆಸರು</th><th>2005–06ನೇ ಸಾಲಿನಲ್ಲಿ ಪಾವತಿಸಿದ ವೇತನ</th></tr>
<tr><td>1</td><td>ಶ್ರೀ ಜೈನುಲ್ಲಾ ಬಳ್ಳಾರಿ</td><td>ಸಹಾಯಕ ನಿರ್ದೇಶಕರು</td><td>1,89,720.00</td></tr>
<tr><td>2</td><td>ಶ್ರೀ ಹೆಚ್.ಬಿ ರವೀಂದ್ರ</td><td>ಸಹಾಯಕ ನಿರ್ದೇಶಕರು</td><td>1,89,720.00</td></tr>
<tr><td>3</td><td>ಶ್ರೀ ಸುಜ್ಞಾನಮೂರ್ತಿ</td><td>ಸಹಾಯಕ ನಿರ್ದೇಶಕರು</td><td>1,89,720.00</td></tr>
<tr><td>4</td><td>ಶ್ರೀಮತಿ ಡಿ. ಮೀನಾಕ್ಷಿ</td><td>ಸಹಾಯಕ ನಿರ್ದೇಶಕರು</td><td>1,89,720.00</td></tr>
<tr><td></td><td></td><td>ಒಟ್ಟು ರೂ.</td><td>7,53,432.00</td></tr>
</table>
</td>
<td>ಶ್ರೀ ಜೈನುಲ್ಲಾ ಬಳ್ಳಾರಿ, ಸಹಾಯಕ ನಿರ್ದೇಶಕರು, ಪ್ರಸಾರಾಂಗ ಇವರು ಹೂಡಿದ ಮೊಕದ್ದಮೆಯ ಬಗ್ಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪನ್ನು ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ (ಸಭೆ ಸಂಖ್ಯೆ 73 ಡಿಸೆಂಬರ್ 27, 2001) ಯ ಮುಂದೆ ಮಂಡಿಸಲಾಗಿದೆ. ಸಮಿತಿಯ ತನ್ನ ನಿರ್ಣಯ ಸಂಖ್ಯೆ (3) ರಲ್ಲಿ ಕೆಳಕಂಡಂತೆ ನಿರ್ಧರಿಸಿದೆ.<br><br>ನಿರ್ಣಯ:– ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ಸಹಾಯಕ ನಿರ್ದೇಶಕರ ಶ್ರೇಣಿಯು ರೂ.2200–4000 ಇದ್ದಿತು. ಈ ವೇತನ ಶ್ರೇಣಿಯು ರಾಜ್ಯ ಸರ್ಕಾರ ವೇತನ ಶ್ರೇಣಿಯಲ್ಲಿ ಇಲ್ಲವೆಂಬ ಆಕ್ಷೇಪ ವ್ಯಕ್ತಪಡಿಸಿ ಅದನ್ನು ರೂ.2050–3950ಗೆ ಬದಲಾಯಿಸಿಲು ರಾಜ್ಯ ಸರ್ಕಾರ ಆದೇಶಿಸಿತ್ತು. ಈ ಆದೇಶನ್ನು ಪ್ರಶ್ನಿಸಿ ಶ್ರೀ ಜೈನುಲ್ಲಾ ಬಳ್ಳಾರಿ, ಸಹಾಯಕ ನಿರ್ದೇಶಕರು ಇವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಹೋಗಿದ್ದರು. ನ್ಯಾಯಾಲಯವು ಈ ವೇತನ ಶ್ರೇಣಿಯ ಮರು ನಿಗಿದೀಕರಣವನ್ನು ಮಾಡು ಹಕ್ಕು ರಾಜ್ಯ ಸರ್ಕಾರಕ್ಕೆ ಇಲ್ಲವೆಂಬ ನಿರ್ಣಯವನ್ನು ನೀಡಿದೆ. ಶಿಕ್ಷಣ ಇಲಾಖೆಯು ಹೀಗೆ ಮರು ನಿಗದೀಕರಿಸುವಾಗ ಸಹಾಯಕ ಕುಲಸಚಿವರ ಹುದ್ದೆಗೆ ಈ ಹಿಂದೆ ನಿಗದಿಂಯಾಗಿದ್ದ ರೂ.2200–4000 ವೇತನ ಶ್ರೇಣಿಯು ರೂ.2375–4450 ವೇತನ ಬದಲಾಯಿಸಿದೆ, ಈ ಪೂರ್ವ ನಿರ್ದೇಶನವನ್ನು ಆಧರಿಸಿ ಪ್ರಸಾರಾಂಗದ ಸಹಯಕ ನಿರ್ದೇಶಕರ ವೇತನ ಶ್ರೇಣಿಯನ್ನು ಇದೇ ರೀತಿ ರೂ.2375–4450 (ಮರು ವಿಮರ್ಶಿತ ವೇತನ ಶ್ರೇಣಿ ರೂ.7400–13120) ಗೆ ನಿಗದಿಗೊಳಿಸಲು ಸಮಿತಿಯು ತೀರ್ಮಾನಿಸಿತು ಮತ್ತು ಇತರ ವಿಶ್ವವಿದ್ಯಾಲಯಗಳಲ್ಲಿ ಪ್ರಸಾರಾಂಗದ ಸಹಾಯಕ ನಿರ್ದೇಶಕರಿಗೆ ಇದೇ ವೇತನ ಶ್ರೇಣಿಯನ್ನು ನೀಡಿರುವುದನ್ನು ಕೂಡ ಸಮಿತಿಯ ಗಮನಿಸಿತು. ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲು ಕುಲಸಚಿವರಿಗೆ ಆದೇಶ ನೀಡಿತು.<br><br>ಈ ನಿರ್ಣಯ ಅನುಸರಿಸಿ ಶ್ರೀ ಜೈನುಲ್ಲಾ ಬಳ್ಳಾರಿ ಇವರ ಪರಿಷ್ಕೃತ ವೇತನ ಶ್ರೇಣಿಯನ್ನು ರಾಜ್ಯ ಸರ್ಕಾರದ ಹೊಸ ವೇತನ ಶ್ರೇಣಿಯಲ್ಲಿ</td>
<td></td>
<td></td>
</tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | | ನಿಗದಿಪಡಿಸಿ ನೀಡಲಾಗಿದೆ.<br><br>ಈ ತೀರ್ಪು ವಿಶಿಷ್ಟವಾಗಿ ಶ್ರೀ ಜೈನುಲ್ಲಾ ಬಳ್ಳಾರಿ ಅವರಿಗೆ ಸಂಬಂಧಿಸಿದ್ದಾದರೂ ಒಂದೇ ಶ್ರೇಣಿಯ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಎಲ್ಲರಿಗೂ ಒಂದೇ ಬಗೆಯ ವೇತನ ಶ್ರೇಣೀಯನ್ನು ಕಲ್ಪಿಸುವುದು ನ್ಯಾಯಬದ್ಧವೆಂದು ಕಾರ್ಯಕಾರಿ ಸಮಿತಿಯು ತಿಳಿಸಿರುವುದರಿಂದ ಈ ಸೌಲಭ್ಯವನ್ನು ಉಳಿದ ಸಹಾಯಕ ನಿರ್ದೇಶಕರುಗಳಿಗೆ ಕೂಡ ವಿಸ್ತರಿಸಲಾಗಿದೆ.<br><br>ಕಾರ್ಯಕಾರಿ ಸಮಿತಿಯು ಇಂಥ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಅಧಿನಿಯಮ ಅಧ್ಯಾಯ (14) ಪ್ರಕರಣ (23) ಮತ್ತು ಪರಿನಿಯಮ (62) ಕಾರ್ಯಕಾರಿ ಸಮಿತಿ ಅಧಿಕಾರಿಗಳು ಪ್ರಕರಣದ (9.2.14) ಇವುಗಳಿಂದ ನಿರ್ಧರಿಸಲಾಗಿದೆಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ಈ ಆಕ್ಷೇಪಣೆಯ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. | | |
| 35 | **ವಿಶ್ವವಿದ್ಯಾಲಯದ ಸಿಬ್ಬಂದಿ ವರ್ಗದವರಿಗೆ ನಿಯಮ ಬಾಹಿರವಾಗಿ 'ಇ' ವರ್ಗದ ಸ್ಥಳಗಳ ಬದಲು 'ಸಿ'ವರ್ಗದ ನಗರಗಳ ಮನೆಬಾಡಿಗೆ ಭತ್ಯೆ ಸಂದಾಯ ಮಾಡುತ್ತಿರುವ ಬಗ್ಗೆ.**<br>2005–06ನೇ ಸಾಲಿನ ತನಿಖಾ ವಿಚಾರಣಾ ಪತ್ರ ಸಂ. 09/2005–06, 2003–04 ಮತ್ತು 2004–05ನೇ ಸಾಲಿನಲ್ಲಿ ಹೆಚ್ಚುವರಿ ಸಂದಾಯ ಮಾಡಿದ್ದು ಮನೆ ಬಾಡಿಗೆ ಭತ್ಯೆಯನ್ನು ರೂ.8,30,323.00ಗಳನ್ನು ಸಂಬಂಧಪಟ್ಟ ಸಿಬ್ಬಂದಿಯವರಿಂದ ವಸೂಲಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ಸೂಚಿಸಲಾಗಿತ್ತು. ಆದರೆ ಸದ್ರಿ ವಿಷಯದ ಬಗ್ಗೆ ಪ್ರಸಕ್ತ ಸಾಲಿನ ಲೆಕ್ಕ ತನಿಖೆಗೆ ಮುರುವಳಿ ಮಾಡುವ ಬಗ್ಗೆ ಯಾವ ಮಾಹಿತಿಯನ್ನು ಹಾಜರುಪಡಿಸಿಲ್ಲ. ಸರ್ಕಾರದ ಆದೇಶ ಸಂ: ಎಫ್.ಡಿ–36,ಎಸ್.ಆರ್.ಪಿ.1994, ದಿನಾಂಕ 21.09.94ರ ಪ್ರಕಾರ ಅನುಬಂಧ–ರಲ್ಲಿ 'ಸಿ' ನಗರ ಸಮುಚ್ಛಯ ಕ್ರ.ಸಂ 12ರಲ್ಲಿ ಹೊಸಪೇಟೆ ನಗರ ಸಮುಚ್ಛಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು ಈ ಕೆಳಗಿನಂತಿವೆ.<br>ಎ.1 ಹೊಸಪೇಟೆ ನಗರ ಸಭೆ<br>2. ಅನಂತಶಯನ ಗುಡಿ<br>3. ಕಾರಿಗನೂರು<br>4. ಸಂಕ್ಲಾಪುರ<br>**ಬಿ. 1.ಅಮರಾವತಿ ನಗರ**<br>ಕನ್ನಡ ವಿಶ್ವವಿದ್ಯಾಲಯ ಪರಿನಿಯಮದ ಅಧ್ಯಾಯ–2ರ ಪ್ರಕರಣ–3 ನಿಯಮ–2ರಲ್ಲಿ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವು, ಕಮಲಾಪುರ ಮುನಿಸಿಪಾಲಿಟಿ ಪರಿಮಿತಿಯೊಳಗೆ ಅಥವಾ ಈ ಪರಿಮಿತಿಯ 10 ಮೀಟರ್‌ಗಳ ತ್ಯಾಜ್ಯದ ಪರಿಮಿತಿಯೊಳಗಿರುವ ಯಾವುದೇ ಸ್ಥಳದಲ್ಲಿ ಇರುತ್ತದೆಂದು ನಿಯಮ ಇರುತ್ತದೆ. ಆದರೆ ಸರ್ಕಾರದ ಆದೇಶ ಸಂ. ಎಫ್.ಡಿ. 36, ಎಸ್.ಆರ್.ಪಿ. 1994, ದಿನಾಂಕ 21.09.94ರ ಅನುಬಂಧ–1ರ ಪ್ರಕಾರ ಕಮಲಾಪುರ ಮತ್ತು ಹಂಪಿ ಗ್ರಾಮ ಪಂಚಾಯತಿ ಇ ವರ್ಗದ ಸ್ಥಳ ಅನ್ವಯವಾಗುತ್ತದೆ. ಹೀಗಾಗಿ ವಿಶ್ವವಿದ್ಯಾಲಯ ಪರಿನಿಯಮ–2ರ ಪ್ರಕಾರ ನಿಗದಿಪಡಿಸಿದ ಕೇಂದ್ರ ಸ್ಥಾನವು ಹಂಪಿ ಗ್ರಾಮ ಪಂಚಾಯತಿ ಪರಿಮಿತಿಯೊಳಗೆ ಬರುತ್ತದೆ. ಕಾರಣ ಕಮಲಾಪುರ, ಅಥವಾ ಹಂಪಿಗೆ ಅನ್ವಯಿಸುವ 'ಇ' ವರ್ಗದ ಮನೆ ಬಾಡಿಗೆ ಭತ್ಯೆಯನ್ನು ಸರ್ಕಾರದ ಆದೇಶ ಸಂ.ಎಫ್.ಡಿ.14 ಎಸ್.ಆರ್.ಪಿ. 02, ಬೆಂಗಳೂರು, ದಿನಾಂಕ:12.04.02ರ ಪ್ರಕಾರ ದಿ: 01.04.2002 ರಿಂದ ಜಾರಿಗೆ ಬರುವಂತೆ ಮೂಲ ವೇತನಕ್ಕೆ ಶೇ.4 ರಷ್ಟು ಸಂದಾಯ ಮಾಡಬೇಕಾಗುತ್ತದೆ. ಕಾರಣ 2005–06ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿದ ಮನೆ ಬಾಡಿಗೆಗೆ ಭತ್ಯೆಯನ್ನು ಸಂಬಂಧಪಟ್ಟ ಸಿಬ್ಬಂದಿಯವರಿಂದ ಪಟ್ಟು ರೂ.6,15,660.00ಗಳನ್ನು | ಕನ್ನಡ ವಿಶ್ವವಿದ್ಯಾಲಯ**ದ** ಅಧಿಸೂಚನೆ ಸಂಖ್ಯೆ: ಕವಿಹಂ:ಕುಸ: ಮ.ಬಾ.ಭತ್ಯೆ:2008–09 ದಿನಾಂಕ 04.11.2008ರ ಪ್ರಕಾರ ಕನ್ನಡ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಮನೆ ಬಾಡಿಗೆ ಭತ್ಯೆಯನ್ನು 'ಡಿ' ವರ್ಗದ ದರವನ್ನು ನಿಗದಿಪಡಿಸಿ ನವಂಬರ್ 2008ನೇ ತಿಂಗಳಿನಿಂದ ಪಾವತಿಸಲಾಗಿದೆ.<br>ಈ ಹಿನ್ನೆಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. | | |



PDF created with pdfFactory trial version www.pdffactory.com

<table>
<tr><td></td><td>ವಸೂಲಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ಸೂಚಿಸಿದೆ. ಹಾಗೂ ಸದ್ರಿ ಆದೇಶ ಹೆಚ್ಚುವರಿ ಮೊತ್ತವನ್ನು ಸಂಬಂಧಪಟ್ಟ ಸಿಬ್ಬಂದಿಯವರಿಂದ ವಸೂಲಿ ಮಾಡಿ ಮುಂದಿನ ತನಿಖೆಯಲ್ಲಿ ಹಾಜರು ಪಡಿಸಲು ಸೂಚಿಸಲಾಗಿದೆ.</td><td></td><td></td><td></td></tr>
<tr><td>36</td><td>ಕುಟುಂಬ ಪಿಂಚಣಿ ಮರಣ ಉಪದಾನ ಗಳಿಕೆ ರಜೆ ವೇತನ ಸಂದಾಯ ಮಾಡಿದ್ದು, ಸಿಬ್ಬಂದಿಯವರ ಸೇವಾ ಪುಸ್ತಕಗಳು ಹಾಗೂ ಇತರೆ ದಾಖಲೆಗಳು ಹಾಜರುಪಡಿಸದೆ ಇರುವ ಬಗ್ಗೆ<br>2005–06ನೇ ಸಾಲಿನ ವಿಶ್ವವಿದ್ಯಾಲಯ ಸಿಬ್ಬಂದಿಯವರಿಗೆ ಕುಟುಂಬ ಪಿಂಚಣಿ ಡಿ.ಸಿ.ಆರ್.ಜಿ. ಮತ್ತು ಗಳಿಕೆ ರಜೆ ನಗದೀಕರಣ ಸಂದಾಯ ಮಾಡಿದ್ದು ನಗದು ಪುಸ್ತಕ ಪರಿಶೀಲಿಸಿ ಲೆಕ್ಕ ತನಿಖಾ ವಿಚಾರಣಾ ಸಂ 39 ದಿನಾಂಕ: 26.09.2006 ರಂದು ಸಂಬಂಧಪಟ್ಟ ಸಿಬ್ಬಂದಿಯವರ ಸೇವಾ ಪುಸ್ತಕ ಹಾಗೂ ಇತರೆ ದಾಖಲೆಗಳು ಪರಿಶೀಲನೆಗಾಗಿ ಹಾಜರುಪಡಿಸಲು ಕೋರಲಾಗಿತ್ತು. ಆದರೆ ಸೇವಾ ಪುಸ್ತಕ ಮತ್ತು ದಾಖಲೆಗಳು ಹಾಜರುಪಡಿಸಿಲ್ಲ. ಕಾರಣ 2005–06ನೇ ಸಾಲಿನಲ್ಲಿ ಸಂದಾಯ ಮಾಡಿದ್ದು ಮೊತ್ತ ರೂ. 6,10,133.00ಗಳನ್ನು ಸೇವಾ ಪುಸ್ತಕ ಮತ್ತು ದಾಖಲೆಗಳು ಹಾಜರುಪಡಿಸುವವರಿಗೂ ಆಕ್ಷೇಪಣೆಯಲ್ಲಿಡಲಾಗಿದೆ.
<table>
<tr><th>ಕ್ರ. ಸಂ.</th><th>ಸಿಬ್ಬಂದಿಯವರ ಹೆಸರು</th><th>ಚೆಕ್ ನಂ.</th><th>ದಿನಾಂಕ</th><th>ಚೆಕ್‌ನ ಮೊತ್ತ</th></tr>
<tr><td>1</td><td>ಶ್ರೀಮತಿ ಅನ್ನಪೂರ್ಣ ಕಮ್ಮಾರ</td><td>002914</td><td>21.12.05</td><td>1,03,435.00</td></tr>
<tr><td>2</td><td>ಡಾ. ಬಾಲಸುಬ್ರಮಣ್ಯ</td><td>002917</td><td>02.02.06</td><td>2,50,000.00</td></tr>
<tr><td>3</td><td>ಶ್ರೀ ಜಿ.ಆರ್. ರಾಮಮೂರ್ತಿ</td><td>999829</td><td>30.04.04</td><td>1,40,218.00</td></tr>
<tr><td>4</td><td>ಶ್ರೀಮತಿ ಜಿ.ಪ್ರಭಾವತಿ</td><td>7353593</td><td>20.04.05</td><td>65,493.00</td></tr>
<tr><td>5</td><td>ಶ್ರೀಮತಿ ಬಿ. ಲಕ್ಷ್ಮೀದೇವಿ</td><td>7353596</td><td>06.08.05</td><td>50,987.00</td></tr>
<tr><td></td><td></td><td></td><td>ಒಟ್ಟು ಮೊತ್ತ</td><td>6,10,133.00</td></tr>
</table></td><td>ಕಂಡಿಕೆಯಲ್ಲಿ ಸೂಚಿಸಿದ ಸಿಬ್ಬಂದಿಗಳ ಸೇವಾಪುಸ್ತಕ ಮತ್ತು ವೈಯಕ್ತಿಕ ಕಡತಗಳನ್ನು ಮುಂಬರುವ ಲೆಕ್ಕ ತಪಾಸಣಾ ಸಂದರ್ಭದಲ್ಲಿ ಹಾಜರುಪಡಿಸಲಾಗುವುದು.</td><td></td><td></td></tr>
<tr><td>37</td><td>ಎಲ್ಲಾ ಸಿಬ್ಬಂದಿಗಳ ಸೇವಾ ಪುಸ್ತಕಗಳು ಮುಖ್ಯವಾದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲಾ.<br>2005–06ನೇ ಸಾಲಿನ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂ. 13,2005–06ರಲ್ಲಿ ಕೆಳಕಂಡ ಮುಖ್ಯವಾದ ದಾಖಲೆದೊಂದಿಗೆ ಎಲ್ಲಾ ಸಿಬ್ಬಂದಿಗಳ ಸೇವಾ ಪುಸ್ತಕಗಳು ಪರಿಶೀಲನೆಗಾಗಿ ಹಾಜರುಪಡಿಸಲು ಕೋರಲಾಗಿತ್ತು.<br>1. ಸೇವಾ ಪುಸ್ತಕ ವಾಚ್ ರಿಜಿಸ್ಟರ್<br>2. ಎಲ್ಲಾ ಸಿಬ್ಬಂದಿಯ ವಾರ್ಷಿಕ ವೇತನ ಬಡ್ತಿ ವಾಚ್ ರಿಜಿಸ್ಟರ್ ಕೆ.ಎಫ್.ಸಿ ನಮೂನೆ ಅನುಚ್ಛೇದ 125ರ ಪ್ರಕಾರ<br>3. ಕಛೇರಿ ಆದೇಶ ಪುಸ್ತಕ ಕಛೇರಿ ಕೈಪಿಡಿ ನಿಯಮ–9ರ ಪ್ರಕಾರ<br>4. ಸರ್ಕಾರದ ಸುತ್ತೂಲೆ ಕಡತ, ಕಛೇರಿ ಕೈಪಿಡಿ ನಿಯಮ 33ರ ಪ್ರಕಾರ<br>ಆದರೆ ಸದ್ರಿ ದಾಖಲೆಗಳನ್ನು ಹಾಜರುಪಡಿಸಿಲ್ಲ, ಕಾರಣ 2005–06ನೇ ಸಾಲಿನಲ್ಲಿ ಸಿಬ್ಬಂದಿಯವರನ್ನು ಗಳಿಕೆ ರಜೆ ನಗದೀಕರಣ ವೇತನ ಹಾಗೂ ವಾರ್ಷಿಕ ವೇತನ ಬಡ್ತಿಯ ವೇತನ ಸಂದಾಯ ಮಾಡಿದ್ದು ಮೊತ್ತ ರೂ. 20,73,116.00ಗಳನ್ನು ಸೇವಾ ಪುಸ್ತಕಗಳು ಹಾಜರು ಪಡಿಸುವವರಿಗೂ ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ ಸದ್ರಿ ದಾಖಲೆಗಳು ಮುಂದಿನ ಲೆಕ್ಕ ತನಿಖೆಯಲ್ಲಿ ಹಾಜರುಪಡಿಸಲು ಸೂಚಿಸಲಾಗಿದೆ. ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಸೇವಾ ಪುಸ್ತಕಗಳನ್ನು ಲೆಕ್ಕ ತನಿಖೆಗೆ ಹಾಜರು ಪಡಿಸದಿದ್ದರಿಂದ ನೌಕರರ ಗಳಿಕೆ ರಜೆ/ಪರಿವರ್ತಿತ ಮಂಜೂರು ಮಾಡಿರುವ ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲು ಸಾಧ್ಯವಾಗಿಲ್ಲ.</td><td>ಸೇವಾ ಪುಸ್ತಕಗಳನ್ನು ಮುಂಬರುವ ಲೆಕ್ಕ ತಪಾಸಣಾ ಸಂದರ್ಭದಲ್ಲಿ ಹಾಜರುಪಡಿಸಲಾಗುವುದು. ಉಳಿದಂತೆ ತಮ್ಮ ನಿರ್ದೇಶನದಂತೆ ಕ್ರಮವಹಿಸಲಾಗುವುದು.</td><td></td><td></td></tr>
<tr><td>38</td><td>ಸಿಬ್ಬಂದಿಯ ವೇತನ ಬಿಲ್‌ಗಳಲ್ಲಿ ಕಂಡು ಬಂದ ನ್ಯೂನತೆಗಳು<br>2005–06ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯ ಸಿಬ್ಬಂದಿಯವರ ಮಾಸಿಕ ವೇತನ ಬಿಲ್ ಪರಿಶೀಲಿಸಲಾಯಿತು. ನಿಯಾಮನುಸಾರ ಈ ಕೆಳಕಂಡ ನ್ಯೂನತೆ ಕಂಡು ಬಂದಿದೆ ಕಾರಣ ಸರಿಪಡಿಸಿ ಮುಂದಿನ ಲೆಕ್ಕ ತನಿಖೆಗೆ ಹಾಜರು ಪಡಿಸಲು ಸೂಚಿಸಿದೆ.</td><td>ಡಾ. ಎ.ಆರ್. ಮಂಜುನಾಥ, ಡಾ. ರವೀಂದ್ರಪ್ರಸಾದ್ ಇವರು ಪ್ರತಿನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಮಹೇಶ್ ಉಣಕಲ್ ಅವರು ಸದರಿ ಅವಧಿಯಲ್ಲಿ ಅಮಾನತ್ತಿನಲ್ಲಿದ್ದರು. ಶ್ರೀ ಗಾಳೆಪ್ಪ ಅವರು ರಹಿತ ರಜೆಯಲ್ಲಿದ್ದರು. ಈ ಕಾರಣಗಳಿಂದಾಗಿ</td><td></td><td></td></tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | 1. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 115ರ ಪ್ರಕಾರ ವೇತನ ನಿಶ್ಚಿತ ಭತ್ಯೆ ಮತ್ತು ರಜಾ ಸಂಬಳಗಳ ಬಿಲ್‌ಗಳಿಗೆ 24ನೇ ಪ್ರಪತ್ರದಲ್ಲಿ ರಿಜಿಸ್ಟರ್ ನಿರ್ವಹಿಸಿರುವುದಿಲ್ಲ.<br>2. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ –52ರ ಪ್ರಕಾರ ಕಛೇರಿ ಪತ್ರಿಯಲ್ಲಿ ಸಂಬಂಧಪಟ್ಟ ಸಿಬ್ಬಂದಿಯವರು ಹಣ ಪಡೆಯದ ಬಗ್ಗೆ, ದಿನಾಂಕದೊಂದಿಗೆ ಸಹಿ ಇರುವುದಿಲ್ಲ.<br>3. ಶ್ರೀ ಎ. ಆರ್. ಮಂಜುನಾಥ, ಶ್ರೀ ಎಚ್.ಎಲ್. ರವೀಂದ್ರ ಪ್ರಸಾದ್, ಸಹಾಯಕ ನಿರ್ದೇಶಕರು, ಶ್ರೀ ಮಹೇಶ್ ಉಣಕಲ್, ಅಧೀಕ್ಷಕರು ಹಾಗೂ ಗಾಳೆಪ್ಪ ಇವರ ವೇತನ ಕ್ಲೇಮು ಮಾಡದೇ ಇರುವುದಕ್ಕೆ ಕಾರಣವನ್ನು ನಮೂದಿಸಿರುವುದಿಲ್ಲ.<br>4. ಪ್ರಸಕ್ತ ಸಾಲಿನಲ್ಲಿ ಸಿಬ್ಬಂದಿಯವರಿಗೆ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಿ ಹೆಚ್ಚುವರಿ ವೇತನ ಸಂದಾಯ ಮಾಡಿದ್ದಕ್ಕೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–125ರ ಪ್ರಕಾರ, ಪ್ರಪತ್ರ–28ರಲ್ಲಿ ವೇತನ ಬಡ್ತಿ ಪ್ರಮಾಣವನ್ನು ಬಿಲ್ಲಿನ ಜೊತೆಗೆ ಲಗತ್ತಿಸಿರುವುದಿಲ್ಲ.<br>5. ವೇತನ ಬಿಲ್ ತಯಾರಿಸುವಾಗ. ನಿಯಮಾನುಸಾರ ವೃಂದವಾರ ಮಂಜೂರಾದ, ಹುದ್ದೆ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಹುದ್ದೆಗಳ ಸಂಖ್ಯೆ ಮತ್ತು ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯನ್ನು ನಮೂದಿಸಿರುವುದಿಲ್ಲ. ಸದ್ರಿ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಿದೆ. | ಸದರಿಯವರ ವೇತನ ಬಿಲ್ಲಿನಲ್ಲಿ ವೇತನ ಪಾವತಿ ಮಾಡಿರುವುದಿಲ್ಲ. ಈ ಅಂಶವನ್ನು ತಮ್ಮ ಅವಗಾಹನೆಗೆ ಮಂಡಿಸಲಾಗಿದೆ. | | |
| 39 | **ಮಂಜೂರಾದ ಹುದ್ದೆಗಳ ಸಂಖ್ಯೆ, ಖಾಲಿಯಿರುವ ಹುದ್ದೆಗಳ ಸಂಖ್ಯೆ ವೃಂದವಾರು, ವೇತನ ಶ್ರೇಣಿಗಳ ಪ್ರಕಾರ ವಿವರ ನೀಡುವ ಬಗ್ಗೆ.**<br>ಲೆಕ್ಕ ತನಿಖಾ ವಿಚಾರಣೆ ಸಂ–26, ದಿ:25.09.2006ರಂದು, 2005–06ನೇ ಸಾಲಿನ ದಿನಾಂಕ 31.03.2006ರ ಅಂತ್ಯಕ್ಕೆ ಇರುವ ಮಂಜೂರಾದ ಹುದ್ದೆಗಳ ಸಂಖ್ಯೆ, ಖಾಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ಸಂಖ್ಯೆ ವೃಂದವಾರು ಹಾಗೂ ವೇತನ ಶ್ರೇಣಿಗಳ ಪ್ರಕಾರ ಮಾಹಿತಿಯನ್ನು ಲೆಕ್ಕ ತನಿಖೆಗಾಗಿ ನೀಡಲು ಕೋರಲಾಗಿತ್ತು. ಆದರೂ ಸದ್ರಿ ಮಾಹಿತಿಯನ್ನು ಹಾಜರುಪಡಿಸಿಲ್ಲ. ವಿವರಗಳನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಕೋರಿದೆ. | ಕನ್ನಡ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳುಳ್ಳ ತಃಖ್ತೆಯನ್ನು ಲಗತ್ತಿಸಲಾಗಿದೆ. | | |
| 40 | **ಬಾಕಿ ಹಾಗೂ ಪೂರಕ ವೇತನ ಬಿಲ್‌ಗಳಲ್ಲಿ ಕಂಡು ಬಂದ ನ್ಯೂನತೆಗಳು.**<br>2005–06ನೇ ಸಾಲಿನಲ್ಲಿ ಶ್ರೀ ಪುಟ್ಟಮಾದಯ್ಯ ಇವರಿಗೆ ಚೆಕ್ ಸಂ.0017586, ದಿ:16.07.05ರಲ್ಲಿ ರೂ, 4490.00ವನ್ನು ಡಾ.ಸಿ.ಎಸ್. ವಾಸುದೇವನ್ ಇವರಿಗೆ ಚೆಕ್ ಸಂ.001787, ದಿನಾಂಕ 01.09.05ರಲ್ಲಿ ರೂ.2258.00ವನ್ನು ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಿ ವೇತನ ಬಾಕಿಯನ್ನು ಸಂದಾಯ ಮಾಡಿದ್ದು ಪರಿಶೀಲಿದೆ, ಆದರೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ ಸಂ–132ರ ಪ್ರಕಾರ ವೇತನ ಬಡ್ತಿ ಮಂಜೂರು ಮಾಡುವ ಅಧಿಕಾರಿಯ ಹೆಸರು ಮತ್ತು ಅದನ್ನು ಮಂಜೂರು ಮಾಡಿದ ಆದೇಶದ ಕ್ರಮಾಂಕವನ್ನು ಹಾಗೂ ದಿನಾಂಕವನ್ನು ಬಿಲ್ಲಿನಲ್ಲಿ ನಮೂದಿಸಿರುವುದಿಲ್ಲ ಹಾಗೂ ಅನುಚ್ಛೇದ ಸಂ–133ರ ಪ್ರಕಾರ ಪೂರಕ ಪ್ರಮಾಣ ಪತ್ರವನ್ನು ಬಿಲ್ಲಿನಲ್ಲಿ ನಮೂದಿಸಿರುವುದಿಲ್ಲ.<br>ಸದ್ರಿ ನಿಯಮದ ಪ್ರಕಾರ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ಸದರಿ ಕಂಡಿಕೆಯಲ್ಲಿ ಸೂಚಿಸಿರುವ ನಿರ್ದೇಶನಗಳನ್ವಯ ಕ್ರಮ ಕೈಗೊಳ್ಳಲಗುವುದು. | | |
| 41 | **ವಿಶ್ವವಿದ್ಯಾಲಯದ ವಸತಿ ಗೃಹಗಳಲ್ಲಿ ವಾಸವಿರುವ ಸಿಬ್ಬಂದಿಯವರ ವೇತನದಲ್ಲಿ ಪರಿಷ್ಕೃತ ದರಗಳಲ್ಲಿ ಮನೆ ಬಾಡಿಗೆ ಮುರುವಳಿ ಮಾಡದಿರುವ ಬಗ್ಗೆ.**<br>2005–06ನೇ ಸಾಲಿನ ವಿಶ್ವವಿದ್ಯಾಲಯ ವಾಸದ ಕಟ್ಟಡಗಳಲ್ಲಿ ವಾಸ ಮಾಡುತ್ತಿರುವ ಸಿಬ್ಬಂದಿಯವರಿಂದ ಮನೆ ಬಾಡಿಗೆ ವಸೂಲಿ ಮಾಡಿರುವುದನ್ನು ಪರಿಶೀಲಿಸಲಾಗಿ ಮನೆ ಬಾಡಿಗೆಯನ್ನು ಕಡಿಮೆ ದರದಲ್ಲಿ ಮುರುವಳಿ | ಕನ್ನಡ ವಿಶ್ವವಿದ್ಯಾಲಯದ ವಸತಿ ಗೃಹಗಳಲ್ಲಿ ವಾಸ ಮಾಡುತ್ತಿರುವ ನೌಕರರ ವೇತನದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಲೋಇ:394:ಪಿಪಿಎಂ:99 ದಿನಾಂಕ 19.07.2001ರ ಅನ್ವಯ ಉದ್ಯೋಗಿಗಳು ಪಡೆಯುತ್ತಿರುವ ಮನೆ ಬಾಡಿಗೆ ಭತ್ಯೆಯಷ್ಟೇ ಮೊತ್ತವನ್ನು ವಸತಿಗೃಹದ ಬಾಡಿಗೆಯನ್ನಾಗಿ ಜುಲೈ 19, 2001ರಿಂದ | | |



PDF created with pdfFactory trial version www.pdffactory.com

| | | | | |
|---|---|---|---|---|
| | ಮಾಡಿರುತ್ತಾರೆ. ಕಾರಣ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–42 ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖೆ ಕೋಡ್ ವ್ಯಾಲೊಂ ಖರ ನಿಯಮ 419 ಹಾಗೂ ಸರ್ಕಾರದ ಆದೇಶ ಸಂ. ಲೋ.ಇ.–3941 ಪಿ.ಬಿ.ಎಸ್ – 99, ದಿನಾಂಕ 25.10.2000ರ ಪ್ರಕಾರ ವಿಶ್ವವಿದ್ಯಾಲಯದ ಆವರಣದಲ್ಲಿರುವ ವಸತಿ ಗೃಹದ ಬಾಡಿಗೆಯನ್ನು ಸಂಬಂಧಪಟ್ಟ ಸಿಬ್ಬಂದಿಯವರ ಪ್ರತಿ ತಿಂಗಳ ಇಟ್ಟು ಸಂಬಳದ ಶೇ.10 ರಷ್ಟು ಅಥವಾ ಅವರು ವೇತನದಲ್ಲಿ ಪಡೆಯುವ ಮನೆಬಾಡಿಗೆ ಭತ್ಯೆ ಇವುಗಳಲ್ಲಿ ಯಾವುದು ಹೆಚ್ಚು ಅದನ್ನು ಬಾಡಿಗೆ ಮೊತ್ತವನ್ನು ಮುರುವಳಿ ಮಾಡಬೇಕಾಗುತ್ತದೆ. ಸದ್ರಿ ನಿಯಮ ಪ್ರಕಾರ ಲೆಕ್ಕಾಚಾರ ಮಾಡಿದಂತೆ ಅನುಬಂಧ–10ರಲ್ಲಿ ತಿಳಿಸಿರುವ ಸಿಬ್ಬಂದಿಯವರಿಂದ ಮನೆ ಬಾಡಿಗೆ ಒಟ್ಟು ಮೊತ್ತ 1,81,140.00 ಗಳನ್ನು ವಸೂಲಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ಸೂಚಿಸಿದೆ. | ಪೂರ್ವಾನ್ವಯವಾಗುವಂತೆ ಕಡಿತಗೊಳಿಸಲು ಕ್ರಮವಹಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಅಧಿಸೂಚನೆಯನ್ನು ಹೊರಡಿಸಲಾಗಿದೆ. (ಅಧಿಸೂಚನೆ ಸಂಖ್ಯೆ ಕವಿಹಂ:ಕುಸ: 77: ಸಿಬ್ಬಂದಿ .ವ.ಗೃ.ಬಾ:2006–07 ದಿನಾಂಕ ಮಾರ್ಚ್ 21,2007 | | |
| 42 | **2005–06ನೇ ಸಾಲಿನ ಅಳತೆ ಪುಸ್ತಕಗಳಲ್ಲಿ ಹಾಗೂ ಕಾಮಗಾರಿಯ ಬಿಲ್‌ಗಳಲ್ಲಿ ಕಂಡು ಬಂದ ನ್ಯೂನತೆಗಳು.**<br>2005–06ನೇ ಸಾಲಿನಲ್ಲಿ ಕಾಮಗಾರಿಯ ಬಿಲ್ ಮತ್ತು ಅಳತೆ ಪುಸ್ತಕಗಳು ಪರಿಶೀಲಿಸಲಾಯಿತು. ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿದೆ. ಕಾರಣ ನಿಯಮ ಪ್ರಕಾರ ಸರಿಪಡಿಸಿ ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ.<br>ಕರ್ನಾಟಕ ಲೋಕೋಪಯೋಗಿ ಇಲಾಖೆ (ಎ) ಕೋಡ್ ನಿಯಮ 209(ಸಿ) ಮತ್ತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ–183 II IIIರ ಪ್ರಕಾರ ಅಳತೆಗಳ ಪ್ರತಿ ವರ್ಗವೂ ಈ ಮುಂದಿನವುಗಳನ್ನು ಸೂಚಿಸುವ ನಮೂದುಗಳಿಂದ ಪ್ರಾರಂಭವಾಗಬೇಕು.<br>**I ಮಾಡಿದ ಕಾಮಗಾರಿಗೆ ಸಂಬಂಧಪಟ್ಟ ಬಿಲ್‌ಗಳ ಸಂದರ್ಭದಲ್ಲಿ**<br>A. ಅಂದಾಜಿನಲ್ಲಿ ಕೊಟ್ಟಿರುವಂತೆ ಕಾಮಗಾರಿಯ ಪೂರ್ಣ ಹೆಸರು<br>B. ಕಾಮಗಾರಿಯ ಸ್ಥಳ<br>C. ಕಾಂಟ್ರಕ್ಟರ್‌ನ ಹೆಸರು<br>D. ಒಪ್ಪಂದದ ಸಂಖ್ಯೆ ಮತ್ತು ದಿನಾಂಕ ಯಾವುದಾದರೂ ಇದ್ದರೆ ಮತ್ತು<br>E. ಅಳತೆಯ ದಿನಾಂಕ<br>F. ಕಾಮಗಾರಿ ಪೂರ್ಣಗೊಂಡಿದ ದಿನಾಂಕ<br>G. ಕಾಮಗಾರಿಯನ್ನು ಪ್ರಾರಂಭ ಮಾಡಲು ಗುತ್ತಿಗೆದಾರರಿಗೆ ಜಾರಿಮಾಡಿರುವ ಆದೇಶ ಸಂ ಮತ್ತು ದಿ:<br>**II ಸಾಮಗ್ರಿಗಳ ಸರಬರಾಜಿಗೆ ಸಂಬಂಧಪಟ್ಟ ಬಿಲ್‌ಗಳ ಸಂದರ್ಭದಲ್ಲಿ**<br>1. ಸರಬರಾಜುಗಾರನ ಹೆಸರು<br>2. ಅವರ ಒಪ್ಪಂದದ ಸಂಖ್ಯೆ ಮತ್ತು ದಿನಾಂಕ ಯಾವುದಾದರೂ ಇದ್ದರೆ ಅಥವಾ ಆದೇಶ ಸಂ.<br>3. ಸರಬರಾಜಿನ ದಿನಾಂಕ<br>4. ಅಳತೆಯ ದಿನಾಂಕ<br>ಮೇಲಿನ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಲಾಗಿದೆ. | **I .**<br>A.ಕಾಮಗಾರಿಯ ಪೂರ್ಣ ಹೆಸರು ಬರೆಗಿದೆ.<br>B.ಕಾಮಗಾರಿಯ ಸ್ಥಳ ಬರೆದಿದೆ<br>C.ಕಾಂಟ್ರಕ್ಟರ್‌ನ ಹೆಸರು ಬರೆದಿದೆ.<br>D.ಒಪ್ಪಂದ ಸಂಖ್ಯೆ ಮತ್ತು ದಿನಾಂಕ ಬರೆದಿದೆ.<br>E.ಅಳತೆಯ ದಿನಾಂಕ ಬರೆಯಲಾಗುವುದು<br>F.ಕಾಮಗಾರಿ ಪೂರ್ಣಗೊಂಡ ದಿನಾಂಕ ಬರೆದಿದೆ<br>G.ಕಾಮಗಾರಿಯನ್ನು ಪ್ರಾರಂಭ ಮಾಡಲು ಗುತ್ತಿಗೆದಾರರಿಗೆ ವಿಶ್ವವಿದ್ಯಾಲಯದ ವತಿಯಿಂದ ಆದೇಶ ನೀಡಲಾಗಿರುತ್ತದೆ.<br>**II .**<br>1. ಸರಬರಾಜುದಾರನ ಹೆಸರು ಬರೆದಿದೆ.<br>2. ಕೆಲವು ಸಾಮಾಗ್ರಿ ಖರೀದಿಯಲ್ಲಿ ಒಪ್ಪಂದ ಮಾಡಲಾಗಿದ್ದು, ಅದರಲ್ಲಿ ಒಪ್ಪಂದ ಸಂಖ್ಯೆ ದಿನಾಂಕ ಇರುತ್ತದೆ. ಉಳಿದಂತೆ ಆದೇಶ ಸಂಖ್ಯೆ ಇರುತ್ತದೆ.<br>3. ಸರಬರಾಜಿನ ಉದ್ದೇಶ ನಮೂದಿಸಿದೆ.<br>4. ಅಳತೆಯ ದಿನಾಂಕ ಬರೆಯಲಾಗುವುದು<br>ಈ ಹಿನ್ನೆಲೆಯಲ್ಲಿ ಸದರಿ ಪ್ಯಾರವನ್ನು ಕೈಬಿಡಲು ಕೋರಲಾಗಿದೆ. | | |



PDF created with pdfFactory trial version www.pdffactory.com

<table>
<tr><td></td><td></td><td></td><td></td><td></td></tr>
<tr><td>43</td><td>ಕನ್ನಡ ವಿಶ್ವವಿದ್ಯಾಲಯ ಟೆಂಡರ್ ಕಾಮಗಾರಿಗಳ ಅಂತಿಮ ಬಿಲ್ ಬಗ್ಗೆ.<br>2005–06ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಟೆಂಡರ್ ಕಾಮಗಾರಿಯ ಕೆಳಕಂಡ ಅಂತಿಮ ಬಿಲ್‌ಗಳು ಸಂದಾಯ ಮಾಡಲಾಗಿರುತ್ತದೆ. ಆದರೆ ಕೆಲವು ಮುಖ್ಯವಾದ ದಾಖಲೆಗಳು ಲಗತ್ತಿಸಿರುವುದಿಲ್ಲ.
<table>
<tr><th>ಕ್ರ ಸಂ</th><th>ಗುತ್ತಿಗೆದಾರರ ಹೆಸರು</th><th>ಕಾಮಗಾರಿಯ ಹೆಸರು</th><th>ಓಚರ್ ಸಂ</th><th>ಬಿಲ್ಲಿನ ಮೊತ್ತ</th></tr>
<tr><td>1</td><td>ಶ್ರೀ ರಾಮಪ್ರಸಾದ್</td><td>ಸುವರ್ಣ ಗ್ರಂಥಾಲಯ ಕಟ್ಟಡ ನಿರ್ಮಾಣ</td><td>53/4.05</td><td>98,642.00</td></tr>
<tr><td>2</td><td>ಶ್ರೀ ಎನ್. ನಾಗರಾಜ ರೆಡ್ಡಿ</td><td>ಆಡಳಿತ ಸಿಬ್ಬಂದಿ ವಸತಿ ಗೃಹ (ಸಿಂಗಲ್) ಕಟ್ಟಡ ನಿರ್ಮಾಣ</td><td>1032/11/05</td><td>70,166.00</td></tr>
<tr><td></td><td></td><td>ಒಟ್ಟು</td><td></td><td>1,68,808.00</td></tr>
</table>
1. ಪಿ.ಡಬ್ಲ್ಯೂಡಿ ಇಲಾಖೆ ಕೋಡ್ ವ್ಯಾಲ್ಯೂಂ I ಪ್ಯಾರ ಸಂ. 322ರ ಪ್ರಕಾರ ಸಮಾಪ್ತಿ ವರದಿಯನ್ನು ನಿಗದಿತ ನಮೂನೆ ಪಿಬ್ಲೂಡಿ ಲಗತ್ತಿಸಿರುವುದಿಲ್ಲ.<br>2. ಪಿ ಡಬ್ಲ್ಯೂಡಿ ಇಲಾಖೆ ಕೋಡ್ ವ್ಯಾಲ್ಯೂಂ I ಪ್ಯಾರ ಸಂ 266ರ ಪ್ರಕಾರ ಅಂದಾಜು ಮೊತ್ತ 20,000.00 ರೂ. ಕ್ಕಿಂತ ಹೆಚ್ಚಿಗೆಯಿರುವ ಕಾಮಗಾರಿಯ ಸಮಾಪ್ತಿ ವರದಿ ಜೊತೆಗೆ ರೀಕಾರ್ಡ್ ಡ್ರಾಯಿಂಗ್ ಲಗತ್ತಿಸಿರುವುದಿಲ್ಲ.<br>3. ಪಿ ಡಬ್ಲ್ಯೂಡಿ ಇಲಾಖೆ ಕೋಡ್ ವ್ಯಾಲ್ಯೂಂ I ಪ್ಯಾರ ಸಂ267ರ ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–184ರ ಪ್ರಕಾರ ಸಮಾಪ್ತಿ ವರದಿ ಮಂಜೂರಾತಿಗೆ ಕಾಮಗಾರಿಯು ಪೂರ್ಣವಾದಾಗ ಸಮಾಪ್ತಿ ವರದಿಯನ್ನು ತಯಾರಿಸಿ ಮಂಜೂರು ಮಾಡುವ ಪ್ರಾಧಿಕಾರಿಗಳ ಮೂಲಕ ಲೆಕ್ಕ ಪರಿಶೋಧನಾ ಕಛೇರಿಗೆ ಕಳುಹಿಸಿರುವುದಿಲ್ಲ.<br>4. ಅಂತಿಮ ಬಿಲ್‌ಗಳಿಗೆ ಬಾಕಿ ಇಲ್ಲ ಎಂಬ ದೃಢೀಕರಣ ಲಗತ್ತಿಸಿರುವುದಿಲ್ಲ. ಕಾರಣ ಸದ್ರಿ ದಾಖಲೆಗಳು ಹಾಜರುಪಡಿಸುವರೆಗೂ ಸಂದಾಯ ಮಾಡಿದ್ದು ಒಟ್ಟು ರೂ. 1,68,808.00 ಆಕ್ಷೇಪಣೆಯಲ್ಲಿಡಲಾಗಿದೆ.</td><td>1. ವಿಶ್ವವಿದ್ಯಾಲಯದ ಕಾಮಗಾರಿ ಪೂರ್ಣಗೊಂಡ ಪ್ರಮಾಣದ ಪ್ರಮಾಣ ಪತ್ರ ಲಗತ್ತಿಸಿದೆ.<br>2. ಕಾಮಗಾರಿಯ ಸಮಾಪ್ತಿ ವರದಿ ಜೊತೆಗೆ ರೆಕಾರ್ಡ್ ಡ್ರಾಯಿಂಗ್ ಲಗತ್ತಿಸಲಾಗಿದೆ.<br>3. ಕಾಮಗಾರಿಯು ಪೂರ್ಣವಾದಾಗ ಸಮಾಪ್ತಿ ವರದಿ ತಯಾರಿಸಿ ಮಂಜೂರು ಮಾಡುವ ಪ್ರಾಧಿಕಾರಿಗಳ ಮೂಲಕ ಲೆಕ್ಕ ಶಾಖೆಗೆ ಕಳುಹಿಸಲಾಗುವುದು.<br>4. ಅಳತೆ ಪುಸ್ತಕದಲ್ಲಿ ಬಾಕಿ ಇಲ್ಲ ಎಂಬ ದೃಢೀಕರಣ ಮಾಡಲಾಗಿದೆ.<br>ಮೇಲಿನಂತೆ ಮುಂದಿನ ಲೆಕ್ಕ ತಪಾಸಣಾ ಸಮಯದಲಲಿ ಹಾಜರು ಪಡಿಸಲಾಗುವುದು.</td><td></td><td></td></tr>
<tr><td>44</td><td>ಕಾಮಗಾರಿ ಬಿಲ್‌ಗಳಲ್ಲಿ ಸಿ.ಬಿ.ಎಫ್ ಮುರುವಳಿ ಮಾಡುವ ಬಗ್ಗೆ.<br><br>2005–06ನೇ ಸಾಲಿನಲ್ಲಿ ಕಾಮಗಾರಿಗಳ ಬಿಲ್ ಪರಿಶೀಲಿಸಲಾಗಿ ಬಿಲ್‌ಗಳಲ್ಲಿ, ಸಿ.ಬಿ.ಎಫ್. ಮುರುವಳಿ ಮಾಡಿರುವುದಿಲ್ಲ. ಕಾರಣ ಬಿಲ್ ಮೊತ್ತಕ್ಕೆ ಶೇ.0.10ರಂತೆ ಸಂಬಂಧಪಟ್ಟವರಿಂದ ವಸೂಲಿ ಮಾಡಿ ಒಟ್ಟು ರೂ. 608.00 ಮುಖ್ಯ ಇಂಜಿನಿಯರ್ (ಸಂಪರ್ಕ ಮತ್ತು ಕಟ್ಟಡ) ದಕ್ಷಿಣ ವಲಯ, ಬೆಂಗಳೂರು ಇವರಿಗೆ ಚೆಕ್ ಮುಖಾಂತರ ಸಂದಾಯ ಮಾಡಲು ಸೂಚಿಸಿದೆ.
<table>
<tr><th>ಕ್ರ.ಸಂ</th><th>ಗುತ್ತಿಗೆದಾರರ ಹೆಸರು</th><th>ಚೆಕ್ ಸಂ</th><th>ದಿನಾಂಕ</th><th>ಬಿಲ್ಲಿನ ಮೊತ್ತ</th><th>ಮುರುವಳಿ ಮಾಡಬೇಕಾದ ಸಿಬಿಎಫ್</th></tr>
<tr><td>1</td><td>ಬಿ.ಕೆ. ಎಲೆಕ್ಟ್ರಿಕಲ್ಸ್ , ಹೊಸಪೇಟೆ</td><td>350648</td><td>18.01.06</td><td>57712</td><td>58.00</td></tr>
<tr><td>2</td><td>ಬಿ.ಕೆ. ಎಲೆಕ್ಟ್ರಿಕಲ್ಸ್ , ಹೊಸಪೇಟೆ</td><td>350649</td><td>18.01.06</td><td>45650</td><td>46.00</td></tr>
</table></td><td>ಸಂಬಂಧಪಟ್ಟ ಗುತ್ತಿಗೆದಾರರ ಕಾಮಗಾರಿ ಬಿಲ್ಲುಗಳಲ್ಲಿ ಸಿ.ಬಿ.ಎಫ್ ಮೊತ್ತ ರೂ. 608/– ಮುರುವಳಿ ಮಾಡಿ ಮುಖ್ಯ ಇಂಜಿನಿಯರ್(ಸಂಪರ್ಕ ಮತ್ತು ಕಟ್ಟಡ) ದಕ್ಷಿಣ ವಲಯ, ಬೆಂಗಳೂರು ಇವರಿಗೆ ಸಂದಾಯ ಮಾಡಲು ಕ್ರಮವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td><td></td><td></td></tr>
</table>



PDF created with pdfFactory trial version www.pdffactory.com

| | | | | | |
|---|---|---|---|---|---|
| 3 | ಎಂ.ಎ.ಎಸ್. ಪವಾರ್ಸ್, ಹೊಸಪೇಟೆ | 020800 | 23.03.06 | 11264 | 11.00 |
| 4 | ಶ್ರೀ ಪಿ.ಲಕ್ಷ್ಮೀರೆಡ್ಡಿ, ಹೊಸಪೇಟೆ | 07, | 04.04.05 | 19068 | 19.00 |
| 5 | ಶ್ರೀ ರಾಮಪ್ರಸಾದ್, ಹೊಸಪೇಟೆ | 53 | 18.04.05 | 98642 | 99.00 |
| 6 | ಶ್ರೀ.ಟಿ,ಎನ್.ಶ್ರೀನಿವಾಸ್ ಹೊಸಪೇಟೆ | 400 | 18.07.05 | 12226 | 12.00 |
| 7 | ಶ್ರೀ ಎಂ ನಟರಾಜ್, ಹೊಸಪೇಟೆ | 527 | 04.08.05 | 37926 | 38.00 |
| 8 | ಶ್ರೀ ಎನ್. ನಾಗರಾಜ ರೆಡ್ಡಿ, ಹೊಸಪೇಟೆ | 1032 | 08.11.05 | 70166 | 70.00 |
| 9 | ಶ್ರೀ ಟಿ.ಎಂ. ನಟರಾಜನ್, ಹೊಸಪೇಟೆ | 1104 | 24.11.05 | 25686 | 26.00 |
| 10 | ಶ್ರೀ ಟಿ.ಎಂ. ನಟರಾಜನ್, ಹೊಸಪೇಟೆ | 1219 | 21.12.05 | 38596 | 39.00 |
| 11 | ಶ್ರೀ ಆರ್.ಕೆ. ಕನ್ನಯ್ಯ,ಹೊಸಪೇಟೆ | 1731 | 21.12.05 | 22652 | 22.00 |
| 12 | ಶ್ರೀ ಟಿ.ಎನ್. ನಟರಾಜನ್, ಹೊಸಪೇಟೆ | 1806 | 27.03.06 | 34593 | 35.00 |
| 13 | ಶ್ರೀ ಆರ್.ಕೆ. ಕನ್ನಯ್ಯ, ಕಮಲಾಪುರ | 1748 | 27.03.06 | 20160 | 20.00 |
| 14 | ಶ್ರೀ ಹೆಚ್. ಎಂ. ನಂದೀಶ್, ಹೊಸಪೇಟೆ | 1826<br>1871 | 27.03.06<br>27.03.06 | 40359<br>40348 | 40.00<br>40.00 |
| 15 | ಟಿ.ಎಂ. ನಟರಾಜನ್, ಕಮಲಾಪುರ | 1871 | 27.03.06 | 33313 | 33.00 |
| | | | | ಒಟ್ಟು | 608.00 |

| | | | | |
|---|---|---|---|---|
| 45 | **ಎಫ್.ಎಸ್. ಡಿ. ಯನ್ನು ಕ್ಲೇಮು ಮಾಡದೇ ಇರುವ ಬಗ್ಗೆ**<br>2005–06ನೇ ಸಾಲಿನಲ್ಲಿ ದಿನಾಂಕ 31.03.2006 ಅಂತ್ಯಕ್ಕೆ ಅನ್‌ಕ್ಲೇಮೆಂಡ್ ಎಫ್.ಎಸ್.ಡಿ. ರಿಜಿಸ್ಟರ್ ಪ್ರಕಾರ ರೂ. 15,65,141.00 ಅಂತಿಮ ಶಿಲ್ಕು ಇರುತ್ತದೆ. ಕರ್ನಾಟಕ ಪಿಡಬ್ಲ್ಯೂಡಿ ಕೋಡ್ ಪ್ಯಾರಾ– 399ರ ಪ್ರಕಾರ, ಒಂದು ಆರ್ಥಿಕ ವರ್ಷಗಳಲ್ಲಿ ಮೂಲ ಠೇವಣಿ ಮೊತ್ತ ರೂ. 5.00 ಕ್ಕಿಂತ ಹೆಚ್ಚಿಗೆ ಬಾಕಿ ಇರಬಾರದು ಹಾಗೂ ಅನ್‌ಕ್ಲೇಮುಡ್ ಬಾಕಿ ಶಿಲ್ಕನ್ನು 3 ಆರ್ಥಿಕ ವರ್ಷಕ್ಕಿಂತ ಹೆಚ್ಚಿಗೆ ಉಳಿಸಿದ ಮೊತ್ತವನ್ನು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ –278ರ ಪ್ರಕಾರ ಲ್ಯಾಪ್ಸ್‌ಡ್ ಡೆಪಾಸಿಡ್ ಎಂದು ಪರಿಗಣಿಸಲು ಸೂಚಿಸಲಾಗಿದೆ. | | | |
| 46 | **ಡೆಡ್ ಸ್ಟಾಕ್ ರಿಜಿಸ್ಟಾರ್ ನಿರ್ವಹಿಸುವುದು**<br>2005–06ನೇ ಸಾಲಿನಲ್ಲಿ ಸನೇಕ ವಾಹನಗಳನ್ನು ರಿಪೇರಿ ಮಾಡಿಸಿ ಬಿಡಿಭಾಗಗಳನ್ನು ಡೆಡ್ ಸ್ಟಾಕ್ ರಿಜಿಸ್ಟಾರ್‌ನಲ್ಲಿ ನಮೂದಿಸುವುದು. ಸ್ಥಿತಿಗತಿಗಳ ಕುರಿತು ವಾರ್ಷಿಕ ತನಿಖೆ ಮಾಡಿ ತನಿಖಾ ವರದಿಯನ್ನು ರಿಜಿಸ್ಟಾರ್‌ನಲ್ಲಿ | | | |



PDF created with pdfFactory trial version www.pdffactory.com

<table>
<tr><td></td><td>ಸಂಬಂಧಪಟ್ಟ ಅಧಿಕಾರಿಗಳು ಮಾಡಬೇಕಾಗಿದ್ದು ಇದುವರೆಗೂ ಮಾಡಲಾಗಿಲ್ಲ. ಇದರಿಂದ ವಿಶ್ವವಿದ್ಯಾಲಯ ಖರೀದಿಸಲಾದ ಸಾಮಾಗ್ರಿಗಳು ಸದುಪಯೋಗವಾಗಿದೆಯೇ ಸುಸ್ಥಿತಿಯಲ್ಲಿವೆಯೇ ಹೇಗೆಂಬುದನ್ನು ಕಂಡು ಹಿಡಿಯಲಿಕ್ಕಾಗದು ಕಾರಣ ಸದರಿ ರಿಜಿಸ್ಟರ್ ಇಡದೇ ಇರುವ ಕುರಿತು ಸೂಕ್ತ ವಿವರಣೆ ನೀಡಬೇಕಲ್ಲದೆ ರಿಜಿಸ್ಟರ್ ನಿರ್ವಹಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು.</td><td></td><td></td><td></td></tr>
<tr><td>47</td><td>ಚರಾಸ್ತಿಯ ವಹಿಯ ಬಗ್ಗೆ<br>ಪ್ರಸಕ್ತ ಸಾಲಿನ ಪರಿಶೋಧನೆಗೆ ಚರಾಸ್ತಿ ವಹಿಯನ್ನು ಹಾಜರುಪಡಿಸಿರುತ್ತಾರೆ.</td><td>ಪ್ರಸಕ್ತ ಲೆಕ್ಕ ಪರಿಶೋಧನೆಗೆ ಚರಾಸ್ತಿ ವಹಿಯನ್ನು ಹಾಜರುಪಡಿಸಲಾಗಿದೆ. ಯಾವುದೇ ಆಕ್ಷೇಪಣೆ ಇರುವುದಿಲ್ಲ.<br>ಈ ಹಿನ್ನೆಲೆಯಲ್ಲಿ ಸದರಿ ಪ್ಯಾರವನ್ನು ಕೈಬಿಡಲು ಕೋರಲಾಗಿದೆ.</td><td></td><td></td></tr>
<tr><td>48</td><td>ಸ್ಥಿರಾಸ್ತಿ ವಹಿಯ ಬಗ್ಗೆ<br>ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಗೆ ಸ್ಥಿರಾಸ್ತಿ ವಹಿಯನ್ನು ಹಾಜರುಪಡಿಸಿರುತ್ತಾರೆ.</td><td>ಪ್ರಸಕ್ತ ಲೆಕ್ಕ ಪರಿಶೋಧನೆಗೆ ಸ್ಥಿರಾಸ್ತಿ ವಹಿಯನ್ನು ಹಾಜರುಪಡಿಸಲಾಗಿದೆ. ಯಾವುದೇ ಆಕ್ಷೇಪಣೆ ಇರುವುದಿಲ್ಲ.<br>ಈ ಹಿನ್ನೆಲೆಯಲ್ಲಿ ಸದರಿ ಪ್ಯಾರವನ್ನು ಕೈಬಿಡಲು ಕೋರಲಾಗಿದೆ.</td><td></td><td></td></tr>
<tr><td>49</td><td>ಲೆಕ್ಕ ತನಿಖಾ ಶುಲ್ಕ<br>2005–06ನೇ ಸಾಲಿನ ಲೆಕ್ಕ ಪರಿಶೋಧನಾ ಶುಲ್ಕದ ವಿವರಗಳು ಈ ಕೆಳಕಂಡಂತಿವೆ. ದಿನಾಂಕ 21.08.2006 ರಿಂದ 11.10.2006 ರವರೆಗೆ ಈ ಕೆಳಕಂಡ ತನಿಖಾ ತಂಡದಿಂದ ಲೆಕ್ಕ ತನಿಖೆಯನ್ನು ನಿರ್ವಹಿಸಲಾಗಿದೆ.<br>ಲೆಕ್ಕ ಪರಿಶೋಧನಾಧಿಕಾರಿ –1<br>ಲೆಕ್ಕ ಪರಿಶೋಧಕರು –3<br>
<table>
<tr><th>ಕ್ರ.ಸಂ.</th><th>ವಿವರ</th><th>ವೇತನ</th><th>ಪ್ರಯಾಣ ಭತ್ಯೆ</th><th>ಒಟ್ಟು</th></tr>
<tr><td>1</td><td>ಲೆಕ್ಕ ಪರಿಶೋಧನಾಧಿಕಾರಿ</td><td>14650.00</td><td>3925.00</td><td>18575.00</td></tr>
<tr><td>2</td><td>ಲೆಕ್ಕ ಪರಿಶೋಧಕರು – 1</td><td>10250.00</td><td>3925.00</td><td>14175.00</td></tr>
<tr><td>3</td><td>ಲೆಕ್ಕ ಪರಿಶೋಧಕರು – 2</td><td>9500.00</td><td>3175.00</td><td>12675.00</td></tr>
<tr><td>4</td><td>ಲೆಕ್ಕ ಪರಿಶೋಧಕರು – 3</td><td>07100.00</td><td>3175.00</td><td>10275.00</td></tr>
<tr><td></td><td>ಒಟ್ಟು</td><td>41,500.00</td><td>14,200.00</td><td>55,700.00</td></tr>
</table>
<table>
<tr><td>01.04.2005ಕ್ಕೆ ಪ್ರಾರಂಭ ಶಿಲ್ಕು</td><td>1,75,803.00</td></tr>
<tr><td>2005–06ರ ಬೇಡಿಕೆ</td><td>55,700.00</td></tr>
<tr><td>ಒಟ್ಟು</td><td>2,31,503.00</td></tr>
<tr><td></td><td></td></tr>
<tr><td>2005–06ರಲ್ಲಿ ಪಾವತಿ</td><td>92,694.00</td></tr>
<tr><td>31.03.06ಕ್ಕೆ ಬಾಕಿ</td><td>1,38,809.00</td></tr>
</table>
ಬಾಕಿ ಇರುವ ಲೆಕ್ಕ ಪರಿಶೋಧನಾ ಶುಲ್ಕವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗೆ ಪಾವತಿಸಲು ಸೂಚಿಸಿದೆ.<br><br>0070 ಇತರೇ ಆಡಳಿತ ಸೇವೆಗಳು<br>06 ಇತರೇ ಸೇವೆಗಳು<br>110 ಸರ್ಕಾರಿ ಲೆಕ್ಕ ಪರಿಶೋಧನಾ ಶುಲ್ಕ<br>01 ಲೆಕ್ಕ ಪರಿಶೋಧನಾ ಶುಲ್ಕ</td><td>2005–06ನೇ ಸಾಲಿನ ಲೆಕ್ಕ ತನಿಖಾ ಶುಲ್ಕ ರೂ.55,700/–ಗಳನ್ನು ಖಜಾನೆಗೆ ಪಾವತಿಯಾಗುವಂತೆ ಹೊಸಪೇಟೆಯ ಎಸ್.ಬಿ.ಎಂ ನಲ್ಲಿ ದಿನಾಂಕ 09.06.2007 ರಂದು ಜಮಾ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td><td></td><td></td></tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| 50 | **ಸಾಮಾನ್ಯ ಅಭಿಪ್ರಾಯ**<br>ಮುಂಗಡವನ್ನು ಪೂರ್ಣವಾಗಿ ಹೊಂದಾಣಿಕೆ ಮಾಡಲು ಸೂಚಿಸಿದೆ. ಪ್ರಸಾರಾಂಗದಲ್ಲಿ ಬಾಕಿ ಇರುವ ಮೊತ್ತವನ್ನು ಆದಷ್ಟು ಬೇಗ ವಸೂಲಿ ಮಾಡುವುದು.<br>**ನಿಯಂತ್ರಕರ ಪರವಾಗಿ**<br>**ರಾಜ್ಯ ಲೆಕ್ಕಪತ್ರ ಇಲಾಖೆ**<br>**ಬೆಂಗಳೂರು** | ಮುಂಗಡವನ್ನು ಪೂರ್ಣವಾಗಿ ಹೊಂದಾಣಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ. ಪ್ರಸಾರಾಂಗದಲ್ಲಿ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು ಕ್ರಮವಹಿಸಲಾಗುತ್ತಿದೆ. | | |



PDF created with pdfFactory trial version www.pdffactory.com